ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪ್ರಳಯ ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ರೋ ಮತ್ತು ನಾಸಾ ಸಹಭಾಗಿತ್ವದ, ಅತ್ಯಾಧುನಿಕ ರೇಡಾರ್ ತಂತ್ರಜ್ಞಾನದೊಂದಿಗೆ ಭೂಮಿಯ ಮೇಲ್ಮೈಯನ್ನು ಅತ್ಯಂತ ನಿಖರವಾಗಿ ಅಧ್ಯಯನ ಮಾಡುವ ಗುರಿ ಹೊಂದಿರುವ ನಿಸಾರ್ (ನಾಸಾ -ಇಸ್ರೋ ಸಿಂಥೆಟಿಕ್ ಅಪರ್ಚರ್ ರೇಡಾರ್) ಉಪಗ್ರಹದ ಉಡ್ಡಯನ ಇಂದು (ಜುಲೈ 30) ಸಂಜೆ 5.40ಕ್ಕೆ ನಡೆಯಲಿದೆ.



ಸಿಎಂ ಸಿದ್ದರಾಮಯ್ಯ ಅವರು ಮಂಗಳವಾರ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ನಡೆಸಿದರು.

ಪಹಲ್ಗಾಮ್ ನರಮೇಧವನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ ಪ್ರಧಾನಿ ಹೆಸರು ಹೇಳದೆ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ತಿರುಗೇಟು ಕೊಟ್ಟ ಮೋದಿ

ಜಗತ್ತಿನ ಯಾವ ನಾಯಕನೂ ಕದನ ವಿರಾಮಕ್ಕೆ ಪ್ರಯತ್ನಿಸಿಲ್ಲ

ದೆಹಲಿ: ಲೋಕಸಭೆಯಲ್ಲಿ ಆಪರೇಷನ್ ಸಿಂದೂರ ಕುರಿತಂತೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಸುದೀರ್ಘ ಚರ್ಚೆ ನಡೆಯಿತು. ಈ ವೇಳೆ ಪ್ರಧಾನಿ ಮೋದಿ ಅವರು ಪ್ರತಿಪಕ್ಷಗಳಿಗೆ ವಿವರಣೆ ನೀಡಿದ್ದು, ಉಗ್ರವಾದಿಗಳ ವಿರುದ್ಧ ಕೆಂಡ ಕಾರಿದ್ದಾರೆ.

ಏ.22ರಂದು ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಧರ್ಮ ಕೇಳಿ ಗುಂಡಿಟ್ಟು ಕೊಂಡಿರುವುದು ಕ್ರೂರತ್ವದ ಪರಾಕಾಷ್ಠೆಯಾಗಿತ್ತು. ಪಹಲ್ಗಾಮ್ ಘಟನೆಯನ್ನು ಮಾಡಿದ್ದರ ಹಿಂದೆ ಭಾರತದಲ್ಲಿ ಧಾರ್ಮಿಕ ಗಲಭೆಯನ್ನು ತರುವ ಉದ್ದೇಶ ಉಗ್ರವಾದಿಗಳಿಗೆ ಇತ್ತು. ಆದರೆ, ಭಾರತೀಯರು ಈ ಸಂದರ್ಭದಲ್ಲಿ ಒಗ್ಗಟ್ಟಾದರು. ಆಗ ಉಗ್ರರ ಆಟ ನಡೆಯಲಿಲ್ಲ. ಅದಕ್ಕಾಗಿ ನಾನು ಸಮಸ್ತ ಭಾರತೀಯರಿಗೆ ಧನ್ಯವಾದ ಹೇಳ ಬಯಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿಗೆ ನಮ್ಮ ತಾಕತ್ತು ಗೊತ್ತಾಗಿದೆ: ಪಹಲ್ಗಾಮ್ ದಾಳಿಗೆ ವಿರುದ್ಧವಾಗಿ ಭಾರತವು ಕೈಗೊಂಡ ಆಪರೇಷನ್ ಸಿಂದೂರ ಕಾರ್ಯಾಚರಣೆಯು ಇಡೀ ಭಾರತವೇ ಹೆಮ್ಮೆ ಪಡುವಂಥ ಕಾರ್ಯಾಚರಣೆಯಾಗಿದೆ. ಇಡೀ ದೇಶವು ಅದನ್ನು ವಿಜಯೋತ್ಸವದ ರೀತಿ ಆಚರಿಸಿದೆ. ತುಂಬಾ ಸವಾಲಿನ ಕಾರ್ಯಾಚರಣೆಯನ್ನು ಅತ್ಯಂತ ನಿಖರವಾಗಿ, ಪರಿಣಾಮಕಾರಿಯಾಗಿ ನೆರವೇರಿಸಿದ ಭಾರತೀಯ ಭದ್ರತಾ ಪಡೆಗಳನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲು ಇಚ್ಛಿಸುತ್ತೇನೆ. ಈ ಕಾರ್ಯಾಚರಣೆಯು ಭಾರತವನ್ನು ಕೆಣಕುವವರಿಗೆ ಏನಾಗುತ್ತದೆ ಎಂಬುದನ್ನು ಜಗತ್ತಿಗೆ ಸಾರಿ ಹೇಳಿದೆ ಎಂದು ಹೇಳಿದರು.

22 ನಿಮಿಷಗಳಲ್ಲಿ ಧ್ವಂಸಗೈದಿದ್ದೇವೆ: ಏ.22ರಂದು ಪಹಲ್ಗಾಮ್ ದಾಳಿ ನಡೆದಿತ್ತು. ಭಾರತವನ್ನು ಕೆಣಕಿದ ಉಗ್ರರ ಅಡಗುದಾಣಗಳನ್ನು, ತರಬೇತಿ ಕೇಂದ್ರಗಳ ಮೇಲೆ ನಾವು 22 ನಿಮಿಷಗಳ ಕಾಲ ದಾಳಿ ನಡೆಸಿ ಅವೆಲ್ಲವನ್ನೂ ಧ್ವಂಸಗೈದೆವು. → 4

ಟ್ರಂಪ್‌ಗೆ ತಿರುಗೇಟು

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಾವೇ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಮರವನ್ನು ನಿಲ್ಲಿಸಿದ್ದು ಎಂದು ಪದೇ ಪದೇ ಹೇಳಿಕೊಳ್ಳುತ್ತಿರುವುದಕ್ಕೆ ಮೋದಿ ಅವರು ಟ್ರಂಪ್ ಹೆಸರೆತ್ತದೆ ಸ್ಪಷ್ಟನೆ ನೀಡಿದರು. ಜಗತ್ತಿನ ಯಾವುದೇ ನಾಯಕ ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮಕ್ಕೆ ಪ್ರಯತ್ನಿಸಿಲ್ಲ ಎಂದು ಹೇಳಿದರು.

ಕಾಂಗ್ರೆಸ್‌ಗೆ ಟಾಂಗ್

ಆಪರೇಷನ್ ಸಿಂದೂರ ಸಂದರ್ಭದಲ್ಲಿ ಜಗತ್ತಿನ 193 ರಾಷ್ಟ್ರಗಳಲ್ಲಿ ಮೂರು ಮಾತ್ರ ಪಾಕಿಸ್ತಾನದ ಪರವಾಗಿ ನಿಂತಿದ್ದವು. ಆದರೆ, ಉಳಿದೆಲ್ಲಾ ದೇಶಗಳು ಭಾರತದ ಪರವಾಗಿದ್ದವು. ಆದರೆ, ನಮ್ಮ ದೇಶದಲ್ಲಿ ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್ಸೇ ಈ ಕಾರ್ಯಾಚರಣೆಯ ವಿರುದ್ಧ ಟೀಕೆ ಮಾಡಿತು. ಆನಂತರ, ಅದನ್ನು ಒಪ್ಪಿಕೊಂಡಿತು ಎಂದು ಕಾಂಗ್ರೆಸ್ಸಿಗರಿಗೆ ಮುಟ್ಟಿ ನೋಡಿಕೊಳ್ಳುವಂತೆ ಮೋದಿ ಹೇಳಿದರು.

ಪ್ರಧಾನಿ ಭಾಷಣ ಮುಖ್ಯಾಂಶ

- ಜಗತ್ತಿನ ಯಾವುದೇ ನಾಯಕನೂ ಆಪರೇಷನ್ ಸಿಂದೂರ ನಿಲ್ಲಿಸುವಂತೆ ಕೇಳಿಲ್ಲ. ಬದಲಿಗೆ ಪಾಕಿಸ್ತಾನದ ಡಿಜಿಎಂಒ ನೇರವಾಗಿ ಕರೆ ಮಾಡಿ ದಯವಿಟ್ಟು ನಿಲ್ಲಿಸಿ, ಮತ್ತಷ್ಟು ನಾಶವಾಗಲು ಇಷ್ಟವಿಲ್ಲ ಎಂದು ಮನವಿ ಮಾಡಿದ್ದರಿಂದ ಕದನ ವಿರಾಮ ಪ್ರಕ್ರಿಯೆ ನಡೆದವು.
- ಪಹಲ್ಗಾಮ್ ಉಗ್ರ ಕೃತ್ಯದ ನಂತರ ಮತ್ತೊಮ್ಮೆ ಪಾಕಿಸ್ತಾನವು ದೊಡ್ಡ ದಾಳಿ ನಡೆಸಲಿದೆ ಎಂದು ಕರೆ ಮಾಡಿದ್ದ ಅಮೆರಿಕದ ಉಪಾಧ್ಯಕ್ಷರು ಹೇಳಿದರು. ಇದು ಪಾಕಿಸ್ತಾನದ ಉದ್ದೇಶವಾಗಿದ್ದರೆ, ಅದು ಅವರಿಗೆ ದುಬಾರಿ ಆಗಲಿದೆ ಎಂಬುದು ನನ್ನ ಉತ್ತರವಾಗಿತ್ತು.
- ಮೇ 10ರಂದು ಆಪರೇಷನ್ ಸಿಂದೂರ ಅಡಿಯಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ರಮವನ್ನು ನಿಲ್ಲಿಸುವುದಾಗಿ ಭಾರತ ಘೋಷಿಸಿದಾಗ, ವಿಪರ್ಯಾಸ ಎಂದರೆ ಇಲ್ಲಿನ ನಾಯಕರು ಆಪರೇಷನ್ ಸಿಂದೂರ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಪಾಕಿಸ್ತಾನದ ದುರದ್ದೇಶ ಹರಡುವ ಕೆಲಸವನ್ನು ಇಲ್ಲಿ ಮಾಡಿದರು.
- ಭಾರತದ ಪ್ರತಿಯೊಂದು ಪ್ರತಿಕ್ರಿಯೆಯೂ ಮೊದಲಿಗಿಂತ ಬಲವಾಗಿದೆ ಎಂದು ಪಾಕಿಸ್ತಾನ ಇಂದು ಚೆನ್ನಾಗಿ ತಿಳಿದುಕೊಂಡಿದೆ. ಭವಿಷ್ಯದಲ್ಲಿ ಅಗತ್ಯವಿದ್ದಲ್ಲಿ ಭಾರತ ಏನು ಬೇಕಾದರೂ ಮಾಡಬಹುದು ಎಂದು ಅದಕ್ಕೆ ತಿಳಿದಿದೆ.

ಉಗ್ರರ ಮೂಲದ ಬಗ್ಗೆ ಸಾಕ್ಷಿ ಕೊಟ್ಟ ಶಾ

ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನೀವು ಪಾಕಿಸ್ತಾನಕ್ಕೆ ಕ್ಲೀನ್ ಚಿಟ್ ನೀಡಿದ್ದೀರಿ. ಇದು ಆ ದೇಶದಲ್ಲಿನ ಭಯೋತ್ಪಾದಕ ನೆಲೆಗಳ ಮೇಲೆ ಭಾರತ ನಡೆಸಿದ ದಾಳಿಯನ್ನು ಪ್ರಶ್ನಿಸಿದಂತಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಲೋಕಸಭೆಯಲ್ಲಿ ಆಪರೇಷನ್ ಸಿಂದೂರ ಕುರಿತ ಚರ್ಚೆಯಲ್ಲಿ ಮಾತನಾಡಿ, ಸೋಮವಾರ ಕಾಶ್ಮೀರದಲ್ಲಿ ಭದ್ರತಾ ಪಡೆಗಳಿಂದ ಹತ್ಯೆಯಾದ ಮೂವರು ಭಯೋತ್ಪಾದಕರು ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿದ್ದರು. ಈ ಮೂವರು ಪಾಕಿಸ್ತಾನದವರು ಎಂಬುದಕ್ಕೆ ಪುರಾವೆಗಳಿವೆ. ಅದರಲ್ಲಿ ಇಬ್ಬರ ಮತದಾರರ ಸಂಖ್ಯೆಗಳು ಇವೆ. ಪಾಕಿಸ್ತಾನದಲ್ಲಿ ತಯಾರಿಸಿದ ಚಾಕೊಲೇಟ್‌ಗಳು ಅವರ ಬಳಿ ಪತ್ತೆಯಾಗಿವೆ ಎಂದು ಲೋಕಸಭೆಗೆ ತಿಳಿಸಿದರು.

ಮೊದಲ ದಿನ ಆರು ಜಿಲ್ಲೆಯ ಶಾಸಕರೊಂದಿಗೆ ಸಭೆ ಕೆಪಿಸಿಸಿ ಅಧ್ಯಕ್ಷರಿಗಿಲ್ಲ ಆಹ್ವಾನ, ಭಾರಿ ಕುತೂಹಲ

ಶಾಸಕರ ಸಮಸ್ಯೆ ಆಲಿಸಿದ ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕ, ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ ಬಳಿಕ ಮುಖ್ಯ ಮಂತ್ರಿ ಸಿದ್ದ ರಾಮಯ್ಯ ಅವರೂ 'ಪ್ರತ್ಯೇಕ' ಸಭೆಯ ಮ್ಯಾರಥಾನ್ ಆರಂಭಿಸಿದ್ದು, ಶಾಸಕರ ಕಷ್ಟ-ಸುಖವನ್ನು ವಿಚಾರಿಸಿದ್ದಾರೆ.

ಮಂಗಳವಾರ ಇಡೀ ದಿನ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ನಡೆಸಿದ್ದು, ಈ ಸಭೆಯಲ್ಲಿ ಉಸ್ತುವಾರಿ ಸಚಿವರುಗಳೂ ಭಾಗಿಯಾಗಿದ್ದರು. ಉಸ್ತುವಾರಿಗಳಿಗೆ ಆಹ್ವಾನ ನೀಡಿದ್ದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಈ ಸಭೆಗಳಿಗೆ ಆಹ್ವಾನಿಸದಿರುವುದು ಕಾಂಗ್ರೆಸ್‌ನಲ್ಲಿ ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಡಿಸಿಎಂ ಹೊರಗಿಟ್ಟು ಸಭೆ ನಡೆಸುತ್ತಿರುವ ಸಿಎಂ ನಡೆಯನ್ನು ಬಹಿರಂಗವಾಗಿ ಡಿಕೆ ಆಕ್ಷೇಪಿಸಿಲ್ಲವಾದರೂ, ಆಪ್ತರ ಬಳಿ ಈ ವಿಷಯ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೊದಲ ದಿನ ತವರು ಜಿಲ್ಲೆ ಮೈಸೂರಿನಿಂದ ಸಭೆ ಆರಂಭಿಸಿರುವ ಮುಖ್ಯಮಂತ್ರಿಗಳು, ಬಳಿಕ ಚಾಮರಾಜನಗರ, ತುಮಕೂರು, ಕೊಡಗು, ಹಾಸನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಈ ವೇಳೆ ಎರಡು ವರ್ಷದ ಅವಧಿಯಲ್ಲಿ ಆಗಿರುವ ಕಾರ್ಯಕ್ರಮಗಳು, ಯಾವೆಲ್ಲ ಯೋಜನೆಗಳು ಬಾಕಿ ಉಳಿದಿವೆ? ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಶಾಸಕರೊಂದಿಗೆ ಚರ್ಚಿಸಿದ್ದಾರೆ. → 4

> ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರು ಶಾಸಕರನ್ನು ಭೇಟಿ ಮಾಡಿದ ಬಳಿಕ ಅನೇಕ ವಿಚಾರಗಳನ್ನು ಸಿಎಂ ಗಮನಕ್ಕೆ ತಂದಿದ್ದು, ಶಾಸಕರ ಅಹವಾಲುಗಳ ವಿಚಾರವಾಗಿ ಸಿಎಂ ಸಭೆ ಮಾಡುತ್ತಿದ್ದಾರೆ. ಇದರಲ್ಲಿ ತಪ್ಪೇನು ಇಲ್ಲ. ಈ ಬಗ್ಗೆ ನನಗೆ ಯಾವುದೇ ಆಕ್ಷೇಪ ಇಲ್ಲ. ಈ ವಿಚಾರದಲ್ಲಿ ನನಗೆ ಏನೂ ಕಷ್ಟವಾಗದಿದ್ದರೂ, ನಿಮಗೆ ಏಕೆ (ಮಾಧ್ಯಮಗಳು) ಕಷ್ಟವಾಗುತ್ತಿದೆ?
> **-ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಸಿಎಂ ಮತ್ತೆ ದೆಹಲಿಗೆ ಪ್ರಯಾಣ

ಸಿಎಂ ಸಿದ್ದರಾಮಯ್ಯ ಅವರು ಮತ್ತೆ ದೆಹಲಿಗೆ ತೆರಳುತ್ತಿದ್ದು, ಕುತೂಹಲಕ್ಕೆ ಕಾರಣವಾಗಿದೆ. ಆಗಸ್ಟ್ 1ರಂದು ಸಂಜೆ 6 ಗಂಟೆಗೆ ದೆಹಲಿಯ ಐಟಿಸಿ ಮೌರ್ಯ ಹೋಟೆಲ್‌ನಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮ ಆಯೋಜಿಸಲಿದ್ದಾರೆ. ವಿವಿಧ ದೇಶಗಳ ರಾಯಭಾರಿಗಳು ಭಾಗವಹಿಸುವ ಈ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ. ಬಳಿಕ ಆ.2ರಂದು ಬೆ.9.30ಕ್ಕೆ ಎಐಸಿಸಿ ಕಾನೂನು, ಮಾಹಿತಿ ಹಕ್ಕು ವಿಭಾಗ ವಿಜ್ಞಾನ ಭವನದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಭಾಗವಹಿಸಲಿದ್ದಾರೆ. ಈ ವಿಚಾರ ಸಂಕಿರಣದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಭಾಗವಹಿಸಿದ್ದಾರೆ. ಬಳಿಕ ಪಕ್ಷದ ವರಿಷ್ಠರೊಂದಿಗೆ ಶಾಸಕರೊಂದಿಗಿನ ಸಭೆಯ ಸಾರಾಂಶ ವಿವರಿಸಲಿದ್ದಾರೆ. ಈ ವೇಳೆ ರಾಜ್ಯ ರಾಜಕೀಯದ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜ್ಯದ ಐದು ಕಡೆ ಲೋಕಾಯುಕ್ತ ದಾಳಿ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯಾದ್ಯಂತ ಐದು ಸರಕಾರಿ ಅಧಿಕಾರಿಗಳ ಮೇಲೆ ದಾಳಿ ಮಾಡಿದ್ದಾರೆ. ಬಿಡಿಎ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಓಂಪ್ರಕಾಶ್, ಬಿಬಿಎಂಪಿ ಶೆಟ್ಟಿಹಳ್ಳಿ ಉಪ ವಿಭಾಗದ ತೆರಿಗೆ ಮೌಲ್ಯಮಾಪಕ ಎನ್.ವೆಂಕಟೇಶ್, ಹಿರಿಯೂರು ವೈದ್ಯಾಧಿಕಾರಿ ಡಾ.ವೆಂಕಟೇಶ್, ಹಾಸನ ವಿಭಾಗದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರ ಜಯಣ್ಣ, ಗೌರಿಬಿದನೂರಿನ ಗ್ರಾಮೀಣ ಕುಡಿಯುವ ನೀರು ಮತ್ತು ಒಳ ಚರಂಡಿ ಇಲಾಖೆಯ ಕಿರಿಯ ಅಭಿಯಂತರ ಆಂಜನೇಯ ಮೂರ್ತಿಗೆ ಸೇರಿದ ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ.

ಆ.4ಕ್ಕೆ ಬೆಂಗಳೂರಲ್ಲಿ ರಾಗಾ ಪಾದಯಾತ್ರೆ

ಬೆಂಗಳೂರು: ರಾಷ್ಟ್ರ ರಾಜಕಾರಣದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ 'ಮತಗಳ್ಳತನ' ಆರೋಪವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಮುಂದಾಗಿರುವ ಕಾಂಗ್ರೆಸ್, ಇದೀಗ ಅಗಸ್ಟ್ 4ರಂದು ಬೆಂಗಳೂರಿನ ಮಹಾದೇವಪುರ ಕ್ಷೇತ್ರದಿಂದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿವರೆಗೂ ರಾಹುಲ್ ಗಾಂಧಿ ಪಾದಯಾತ್ರೆ ನಡೆಸಲಿದ್ದಾರೆ. ಈ ಪ್ರತಿಭಟನೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ಸಾಥ್ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೃದ್ಧನ ಕೊಂದ ಬೀದಿ ನಾಯಿಗಳು

ಬೆಂಗಳೂರು: ಬೀದಿನಾಯಿ ದಾಳಿಗೆ ವೃದ್ಧ ಬಲಿಯಾದ ಘಟನೆ ತಡರಾತ್ರಿ ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಮ್ ಲೇಔಟ್‌ನಲ್ಲಿ ನಡೆದಿದೆ. ನಾಯಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಸೀತಪ್ಪ (68) ಎಂಬವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತಡರಾತ್ರಿ, ಮನೆಯಿಂದ ಹೊರ ಬಂದಿದ್ದ ಸೀತಪ್ಪ ಅವರ ಮೇಲೆ 8 ಬೀದಿ ನಾಯಿಗಳು ದಾಳಿ ಮಾಡಿವೆ. ತಪ್ಪಿಸಿಕೊಂಡು ಓಡಲಾಗದೇ ನೆಲಕ್ಕೆ ಬಿದ್ದ ಸೀತಪ್ಪ ಅವರ ಕೈ, ಕಾಲು, ಮುಖಕ್ಕೆ ನಾಯಿಗಳು ಕಚ್ಚಿ ಗಂಭೀರವಾಗಿ ಗಾಯಗೊಳಿಸಿದ್ದವು. ಸ್ಥಳದ ಸಮೀಪದಲ್ಲಿದ್ದ ಬೀಟ್ ಪೊಲೀಸರು ಹರಸಾಹಸಪಟ್ಟು ನಾಯಿಗಳಿಂದ ಸೀತಪ್ಪರನ್ನು ರಕ್ಷಿಸಲು ಯತ್ನಿಸಿದ್ದಾರೆ. ಆದರೆ ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದಾರೆ. ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು ಪ್ರಕರಣ) ವರದಿಯಾಗಿದ್ದು, ಮೃತನ ಪುತ್ರ ದೂರು ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

1 ಲಕ್ಷ ರು. ಪರಿಹಾರ

ಬೀದಿನಾಯಿ ದಾಳಿಯಿಂದ ಮೃತಪಟ್ಟ ವೃದ್ಧ ಸೀನಪ್ಪ ಕುಟುಂಬಸ್ಥರಿಗೆ ಕೇವಲ 1 ಲಕ್ಷ ರು. ಪರಿಹಾರ ಕೊಡುವುದಾಗಿ ಬಿಬಿಎಂಪಿ ಮಾಹಿತಿ ನೀಡಿದೆ. 1 ಲಕ್ಷ ರು. ಪರಿಹಾರ ಕೊಡುತ್ತೇವೆ. ಸಂತ್ರಸ್ಥ ವ್ಯಕ್ತಿ ಸೀತಪ್ಪ ಮಾನಸಿಕವಾಗಿ ಸ್ವಲ್ಪ ಅಸ್ಥಿರನಾಗಿದ್ದ. ಅವರು ಬೇರೆ ಸಮಯದಲ್ಲಿ ಹೊರಗೆ ಹೋಗುತ್ತಾರೆ ಎಂದು ಕುಟುಂಬ ತಿಳಿಸಿದೆ. ವರದಿಯ ಆಧಾರದ ಮೇಲೆ, ಬಿಬಿಎಂಪಿ ನಿಯಮಗಳ ಪ್ರಕಾರ ಕುಟುಂಬ ಸದಸ್ಯರಿಗೆ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ಯಲಹಂಕ ವಲಯದ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಮನೋಹರ್ ಅವರು ತಿಳಿಸಿದ್ದಾರೆ.

ಅಶ್ಲೀಲ ಸಂದೇಶ ಪ್ರಕರಣ ಸಿಸಿಬಿಗೆ

ಬೆಂಗಳೂರು: ನಟಿ ರಮ್ಯಾಗೆ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಕಾಮೆಂಟ್, ಸಂದೇಶ ರವಾನಿಸುತ್ತಿದ್ದ ಪ್ರಕರಣದ ತನಿಖೆ ಸಿಸಿಬಿಗೆ ವಹಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದ ಇನ್ಸ್ಟಾಗ್ರಾಂ ಖಾತೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ನಟಿ ರಮ್ಯಾ ದೂರು ನೀಡಿದ ಬೆನ್ನಲ್ಲೇ 30ಕ್ಕೂ ಅಧಿಕ ಇನ್ಸ್ಟಾಗ್ರಾಂ ಖಾತೆ ಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾ ಗಿತ್ತು. ದರ್ಶನ್ ಅಭಿಮಾನಿಗಳು ಎಂದು ಹೇಳಿ ಕೊಂಡು ಸಂದೇಶ ರವಾನೆ, ಕಾಮೆಂಟ್ ಮಾಡುತ್ತಿದ್ದವರ ವಿರುದ್ಧ ಜುಲೈ 28ರಂದು ಖುದ್ದು ರಮ್ಯಾ ಅವರೇ ತೆರಳಿ ಬೆಂಗಳೂರು ನಗರ ಪೊಲೀಸ್ ಆಯುಕ್ತರು ಹಾಗೂ ಸೈಬರ್ ಕ್ರೈಮ್ ಠಾಣೆಗೆ ದೂರು ನೀಡಿದ್ದರು.

> ದೂರಿನನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ. ಜಂಟಿ ಆಯುಕ್ತರ ಮೇಲ್ವಿಚಾರಣೆಯಲ್ಲಿ ಓರ್ವ ಎಸಿಪಿ ಮಟ್ಟದ ಅಧಿಕಾರಿಯಿಂದ ಪ್ರಕರಣದ ತನಿಖೆ ನಡೆಯಲಿದೆ.
> **-ಸೀಮಂತ್ ಕುಮಾರ್‌ಸಿಂಗ್,** ಬೆಂಗಳೂರು ನಗರ ಪೊಲೀಸ್ ಆಯುಕ್ತ

ಧರ್ಮಸ್ಥಳದ ಸುತ್ತ ನಿಗೂಢ ಸಾವುಗಳ ತನಿಖೆ ಚುರುಕುಗೊಳಿಸಿದ ಎಸ್‌ಐಟಿ ಅನಾಮಿಕ ವ್ಯಕ್ತಿ ತೋರಿಸಿದ ಜಾಗದಲ್ಲಿ ಅಗೆದರೂ ಯಾವುದೇ ಕುರುಹು ಇಲ್ಲ

15 ಅಡಿ ಅಗೆದರೂ ಒಂದು ಮೂಳೆಯೂ ಸಿಕ್ಕಿಲ್ಲ

ಧರ್ಮಸ್ಥಳ: ಧರ್ಮಸ್ಥಳ ಪರಿಸರದಲ್ಲಿ ನೂರಾರು ಶವ ಹೂತಿರುವುದಾಗಿ ಅನಾಮಿಕ ವ್ಯಕ್ತಿ ನೀಡಿದ ದೂರಿನನ್ವಯ ವಿಶೇಷ ಪೊಲೀಸ್ ತನಿಖಾ ತಂಡ ಮಂಗಳವಾರ ಮೊದಲನೇ ಸಮಾಧಿ ಆಗೆದರಾದರೂ ಯಾವುದೇ ಕುರುಹು ಪತ್ತೆಯಾಗಿಲ್ಲ. ತಲೆ ಬುರುಡೆ ಇರಲಿ, ಒಂದೇ ಒಂದು ಮೂಳೆಯೂ ಪತ್ತೆ ಯಾಗಿಲ್ಲ.

ಧರ್ಮಸ್ಥಳದ ಸ್ನಾನಘಟ್ಟದ ಸಮೀಪದ ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಶವಗಳನ್ನು ಹೂತಿಡಲಾಗಿದೆ ಎಂದು ಅನಾಮಿಕ ವ್ಯಕ್ತಿಯೊಬ್ಬ ದೂರು ನೀಡಿದ್ದರು. ಆತ ಗುರುತಿಸಿದ ಮೊದಲನೇ ಜಾಗವನ್ನು ಬರೋಬ್ಬರಿ 15 ಅಡಿ ಆಳ, 8 ಅಡಿ ಅಗಲ ಅಗೆದರೂ ಯಾವುದೇ ಕಳೇಬರ ಪತ್ತೆಯಾಗಿಲ್ಲ.

ಆರಂಭದಲ್ಲಿ ಕಾರ್ಮಿಕರು 4 ಅಡಿ ಆಳ ಅಗೆದಿದ್ದರು. ಕಳೇಬರ ಪತ್ತೆಯಾಗದ ಹಿನ್ನೆಲೆಯಲ್ಲಿ ಮತ್ತಷ್ಟು ಅಡಿ ಆಳ ಅಗೆಯಲು ದೂರುದಾರ ಸೂಚಿಸಿದ್ದ. ಹೀಗಾಗಿ ಜೆಸಿಬಿ ಮೂಲಕ 15 ಅಡಿ ಆಳ ಸಮಾಧಿ ಅಗೆಯಲಾಗಿದೆ. ಆದರೆ ಕಳೇಬರ ಪತ್ತೆಯಾಗಿಲ್ಲ. ಹೀಗಾಗಿ ಮಧ್ಯಾಹ್ನ 3.30 ರಿಂದ ಆರಂಭವಾದ ಹಿಟಾಚಿ ಕಾರ್ಯಾಚರಣೆ ಸಂಜೆ 6:15ರವರೆಕ್ಕೆ ಅಂತ್ಯ ಮಾಡಲಾಯಿತು. ಇದೀಗ ದೂರುದಾರ ಗುರುತಿಸಿದ 2ನೇ ಸಮಾಧಿ ಸ್ಥಳ ಅಗೆಯುವ ಕಾರ್ಯ ಬುಧವಾರ ಆರಂಭಗೊಳ್ಳಲಿದೆ.

ಶವಗಳನ್ನು ಹೂತಿಟ್ಟ ಸ್ಥಳಗಳನ್ನು ಗುರುತಿಸಲು ಅನಾಮಿಕ ವ್ಯಕ್ತಿಯನ್ನು ಸ್ಥಳಕ್ಕೆ ಕರೆದೊಯ್ಯ ಎಸ್‌ಐಟಿ ಅಧಿಕಾರಿಗಳು.

ಪೊಲೀಸ್ ನಾಯಿ ಬಳಕೆ: ಕಳೇಬರಗಳು ಅಕ್ಕಪಕ್ಕ ಇದ್ದರೆ ಸಿಗಲೇಬೇಕು ಎಂಬ ಛಲದಿಂದ ವಿಶೇಷ ಪೊಲೀಸ್ ತನಿಖಾ ತಂಡ ಕಾರ್ಯಾಚರಣೆಗೆ ಪೊಲೀಸ್ ನಾಯಿ ಬಳಕೆ ಮಾಡಿದೆ. ಸ್ವಲ್ಪ ಸುಳಿವು ಸಿಕ್ಕರೂ ಪ್ರಕರಣದಲ್ಲಿ ಯಶಸ್ಸು ಸಾಧಿಸಬಹುದು ಎಂಬ ನಿಟ್ಟಿನಲ್ಲಿ ಸಣ್ಣ ಅಂಶವನ್ನೂ ತನಿಖಾ ತಂಡವು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಮುಂದುವರಿದ ಸ್ಥಳ ಮಹಜರು: ಧರ್ಮಸ್ಥಳದಲ್ಲಿ ಶವಗಳನ್ನು ಹೂತಿಟ್ಟಿರುವುದಾಗಿ ದೂರು ನೀಡಿದ್ದ ಅನಾಮಿಕ ವ್ಯಕ್ತಿಯು ಮೊದಲ ದಿನದ ಸ್ಥಳ ಮಹಜರು ವೇಳೆ 13 ಸ್ಥಳಗಳನ್ನು ಗುರುತಿ ಸಿದ್ದ. ಎರಡನೇ ದಿನವಾದ ಮಂಗಳ ವಾರ ಕೂಡ ಸ್ಥಳ ಮಹಜರು ಪ್ರಕ್ರಿಯೆ ಮುಂದುವರಿದಿದೆ.

ಎಸ್‌ಐಟಿ ಅಧಿಕಾರಿ ಗಳ ಒಂದು ತಂಡ ದೂರುದಾರನ ಜತೆ ಸ್ಥಳ ಮಹಜರು ಪ್ರಕ್ರಿಯೆ ಮಾಡಿದೆ. ಮತ್ತಷ್ಟು ಸಮಾಧಿ ಗುರುತಿಸಿರುವ ಮಾಹಿತಿ ಲಭ್ಯವಾಗಿದೆ.

ಕೋರ್ಟ್ ಆದೇಶ ಉಲ್ಲಂಘನೆ ಏಕೆ?

ಬೆಂಗಳೂರು: ನ್ಯಾಯಾಲಯದ ಆದೇಶಗಳನ್ನು ಏಕೆ ಪದೇ ಪದೇ ಉಲ್ಲಂಘನೆ ಮಾಡುತ್ತಿದ್ದೀರಿ' ಎಂದು ಯೂ ಟ್ಯೂಬರ್‌ಗಳನ್ನು ಪ್ರಶ್ನಿಸಿರುವ ಹೈಕೋರ್ಟ್, ಪ್ರತಿಬಂಧಕ ಆದೇಶ ನೀಡಿದ ಮೇಲೂ ಒಂದರ ನಂತರ ಮತ್ತೊಂದು (ಯೂಟ್ಯೂಬ್) ಚಾನಲ್ ಆರಂಭಿಸುತ್ತಿರುವುದೇಕೆ? ಎಂದು ಮೌಖಿಕವಾಗಿ ಪ್ರಶ್ನಿಸಿದೆ. ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಹೋದರ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು ಎಂದು ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿದ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. → 4

14 ಜಲಾಶಯಗಳಲ್ಲಿ ಶೇ.70ಕ್ಕೂ ಹೆಚ್ಚು ನೀರಿನ ಸಂಗ್ರಹ | ಈ ಬಾರಿ ಬೇಸಿಗೆಯಲ್ಲಿ ನೀರಿನ ಸಂಕಷ್ಟ ಇಲ್ಲ

ರಾಜ್ಯದ ಪ್ರಮುಖ ಜಲಾಶಯಗಳು ಭರ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ವರ್ಷ ಉತ್ತಮ ಮುಂಗಾರು ಮಳೆಯಾಗಿರುವ ಹಿನ್ನೆಲೆ ರಾಜ್ಯದ ಪ್ರಮುಖ 14 ಜಲಾಶಗಳು ಶೇ.70ಕ್ಕೂ ಹೆಚ್ಚು ಭರ್ತಿಯಾಗಿರುವುದರಿಂದ ಈ ಬಾರಿ ಬೇಸಿಗೆಯಲ್ಲಿ ನೀರಿನ ಸಂಕಷ್ಟ ಎದುರಾಗದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷದಲ್ಲಿ ಅವಧಿಗೂ ಮುನ್ನ ಮುಂಗಾರು ರಾಜ್ಯಕ್ಕೆ ಪ್ರವೇಶವಾಗಿದ್ದು, ವಾಡಿಕೆಗಿಂತಲೂ ಹೆಚ್ಚು ಮಳೆಯಾಗುತ್ತಿದೆ. ಇದರಿಂದಾಗಿ ನದಿಗಳ ಜಲಾನಯನ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ರಾಜ್ಯದ 14 ಜಲಾಶಯಗಳಲ್ಲಿ ನೀರಿನ ಮಟ್ಟವು ಶೇ.70ಕ್ಕೂ ಅಧಿಕವಾಗಿದೆ. ಮುಂಗಾರು ಮಳೆಯ ಅವಧಿ ಇನ್ನೂ ಇರುವುದರಿಂದ ಮತ್ತಷ್ಟು ಮಳೆಯಾಗಲಿದೆ. ಹೀಗಾಗಿ ಮುಂದಿನ ವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಂಕಷ್ಟ ಎದುರಾಗಲಾರದು ಎಂದು ತಜ್ಞರು ತಿಳಿಸಿದ್ದಾರೆ. ಮೂರು ಜಲವಿದ್ಯುತ್ ಸ್ಥಾವರಗಳುಳ್ಳ ಜಲಾಶಯ ಗಳೂ ಸೇರಿದಂತೆ ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಜುಲೈ 28ರ ವೇಳೆಗೆ 715.92 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಅವುಗಳ ಒಟ್ಟು ಸಾಮರ್ಥ್ಯ 895.62 ಟಿಎಂಸಿ ಆಗಿದೆ. ಕಳೆದ ವರ್ಷ ಜುಲೈ 28 ರಂದು ರಾಜ್ಯದ ಅಣೆಕಟ್ಟೆಗಳಲ್ಲಿ 687.37 ಟಿಎಂಸಿ ಅಡಿ ನೀರು ಸಂಗ್ರಹ ವಾಗಿತ್ತು. ಈ ಬಾರಿ ಒಟ್ಟಾರೆಯಾಗಿ, ಜಲಾಶಯಗಳು ಅವುಗಳ ಸಾಮರ್ಥ್ಯದ ಶೇ.80ರಷ್ಟು ತುಂಬಿವೆ ಹೀಗಾಗಿ ಮುಂದಿನ ವರ್ಷ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಕಾಡುವುದಿಲ್ಲ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. → 4

- ಹೇಮಾವತಿ ಮತ್ತು ಕೆಆರ್‌ಎಸ್ ಶೇ.97ರಷ್ಟು ಭರ್ತಿ
- ಹಾರಂಗಿ ಜಲಾಶಯದಲ್ಲಿ ಶೇ.79ರಷ್ಟು ನೀರು ಸಂಗ್ರಹ
- ಮುಂಗಾರು ಮಳೆ ಇನ್ನೂ ಇರುವುದರಿಂದ ಮತ್ತಷ್ಟು ಮಳೆ

ಸೊಂಪಾದ ಪುಟಗಳು



ಜೀವಗಳನ್ನು ಉಳಿಸುತ್ತಿರುವ ಪ್ರೇಮಪ್ರಸಂಗದ ಫಲ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ನಮ್ಮ ವಿವಿಗಳನ್ನು ಮುಚ್ಚುವ ಸ್ಥಿತಿ ಬರಬಹುದೇ ?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ



ಯಾವತ್ತೂ ನಿಮ್ಮ ವಾದದಿಂದ ಜನರನ್ನು ಗೆಲ್ಲಬಾರದು. ಆದರೆ ನಿಮ್ಮ ಮೌನದಿಂದ ಸೋಲಿಸಬೇಕು. ಯಾರು ನಿಮ್ಮೊಂದಿಗೆ ವಾದ ಮಾಡಲು ಬಯಸುತ್ತಾರೋ, ನಿಮ್ಮ ಮೌನವನ್ನು ಸಹಿಸಿಕೊಳ್ಳುವುದಿಲ್ಲ.

ವಕ್ರತುಂಡೋಕ್ತಿ

ಡ್ರೈವಿಂಗ್ ಲೈಸನ್ಸ್ ಥರ ಮದುವೆಯ ಸರ್ಟಿಫಿಕೇಟ್ ಕೂಡ ಅವಧಿ ಮೀರಿದ್ದರೆ, ಬಹುತೇಕ ಗಂಡಸರು ಅದನ್ನು ನವೀಕರಿಸುತ್ತಿರಲಿಲ್ಲ.

ಪ್ರಜ್ವಲ್ ಭವಿಷ್ಯ ಇಂದು ನಿರ್ಧಾರ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಜನಪ್ರತಿನಿಧಿಗಳ ಕೋರ್ಟ್ ತೀರ್ಪು ಪ್ರಕಟಿಸಲಿದೆ. ಈ ತೀರ್ಪು ಪ್ರಜ್ವಲ್ ರೇವಣ್ಣ ಭವಿಷ್ಯ ನಿರ್ಧರಿಸುವುದರಿಂದ ಭಾರಿ ಮಹತ್ವ ಪಡೆದುಕೊಂಡಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಒಟ್ಟು 4 ಪ್ರಕರಣಗಳಿವೆ. ಈ ನಾಲ್ಕು ಪ್ರಕರಣಗಳ ಪೈಕಿ ಈಗ ಮೊದಲ ಪ್ರಕರಣದ ತೀರ್ಪು ಪ್ರಕಟವಾಗಲಿದೆ. ಈ ಪ್ರಕರಣದಲ್ಲಿ ಈಗಾಗಲೇ ವಾದ-ಪ್ರತಿವಾದ ಮುಗಿದಿದ್ದು, ಸಾಕ್ಷ್ಯಗಳ ವಿಚಾರಣೆ ಕೂಡ ಮುಗಿದಿದೆ. ಹೀಗಾಗಿ ಕಾಯ್ದಿರಿಸಿರುವ ಪ್ರಕರಣದ ತೀರ್ಪು ಅನ್ನು ಇಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನೀಡಲಿದೆ. ಪ್ರಜ್ವಲ್ ಅಪರಾಧಿಯೋ ಅಥವಾ ಅಲ್ಲವೋ ಎಂದು ಕೋರ್ಟ್ ಮೊದಲಿಗೆ ತೀರ್ಪು ನೀಡಲಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ

ಚುನಾವಣೆ ಕೆಲಸಗಳಿಂದ ವಿನಾಯಿತಿ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರಿಗೆ ಚುನಾವಣೆ ಕೆಲಸಗಳಿಂದ ವಿನಾಯಿತಿ ನೀಡಲು ರಾಜ್ಯ ಸರಕಾರ ತೀರ್ಮಾನಿಸಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

'ರಾಜ್ಯದಲ್ಲಿ ಗೊಬ್ಬರ ಗದ್ದಲ'



ಪರಿಷ್ಕೃತ ಕೀ ಉತ್ತರ ಪ್ರಕಟ

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗವು ಅಧಿಸೂಚಿಸಲಾದ ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರು ಹುದ್ದೆಗಳ ನೇಮಕಾತಿ ಸಂಬಂಧ ಮೇ 14 ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಸಾಮಾನ್ಯ ಜ್ಞಾನ ಪತ್ರಿಕೆ-1 ವಿಷಯ ಸಂಕೇತ-650 ಮತ್ತು ಪತ್ರಿಕೆ-2 ವಿಷಯ ಸಂಕೇತ-651 ರ ಪರಿಷ್7ತ ಕೀ-ಉತ್ತರಗಳನ್ನು ಆಯೋಗದ ಜಾಲತಾಣ http://kpsc.kar.nic.in/ Key Answer ನಲ್ಲಿ ಪ್ರಕಟಿಸಲಾಗಿದೆ. ಪರಿಷ್ಕೃತ ಕೀ- ಉತ್ತರಗಳು ಪ್ರಕಟಿಸ ಲಾಗಿದ ನಂತರ, ಕೀ-ಉತ್ತರ ಹಾಗೂ ಪರಿಷ್ಕೃತ ಕೀ-ಉತ್ತರಗಳಿಗೆ ಸಂಬಂಧಿಸಿ ದಂತೆ ಸಲ್ಲಿಸುವ ಯಾವುದೇ ಮನವಿ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

SOUTH INDIAN Bank

ಮಾರತಹಳ್ಳಿ ಶಾಖೆ, ನಂ.9, 2ನೇ ಕ್ರಾಸ್, ವಿಜಯ ಪಾರ್ವತಿ ಕಾಂಪ್ಲೆಕ್ಸ್, ಮುನ್ನೇಕೊಳಲ, ಮಾರತಹಳ್ಳಿ, ಬೆಂಗಳೂರು-560 037. ದೂರವಾಣಿ :080-28543519
E-mail: br0491@sib.co.in

ನೋಂದಾಯಿತ ಕಚೇರಿ: ಎಸ್.ಐ.ಬಿ ಹೌಸ್, ಟಿ.ಬಿ. ರಸ್ತೆ, ಮಿಷನ್ ಕ್ವಾರ್ಟರ್ಸ್, ತ್ರಿಶೂರ್ – 680 001 ಕೇರಳ
ದೂರವಾಣಿ ಸಂಖ್ಯೆ: +91-487-2420020, ಫ್ಯಾಕ್ಸ್ ಸಂಖ್ಯೆ: +91-487-2442021,
ಇ-ಮೇಲ್: sibcorporate@sib.co.in, ವೆಬ್‌ಸೈಟ್: www.southindianbank.com
ಕಾರ್ಪೊರೇಟ್ ಗುರುತಿನ ಸಂಖ್ಯೆ: L65191KL1929PLC001017

ಚಿನ್ನದ ಆಭರಣಗಳ ಹರಾಜು ನೋಟೀಸು

ನಮ್ಮ ಬ್ಯಾಂಕಿನ ಮಾರತಹಳ್ಳಿ ಶಾಖೆಯಲ್ಲಿ ಈ ಕೆಳಗಿನ ಖಾತೆ ಸಂಖ್ಯೆಯಲ್ಲಿ ಅಡವಿಟ್ಟಿರುವ ಚಿನ್ನದ ಆಭರಣಗಳನ್ನು ನೋಂದಾಯಿತ ನೋಟೀಸ್ ನೀಡಿದ ನಂತರವೂ ಬ್ಯಾಂಕಿನ ಬಾಕಿಗಳನ್ನು ಪಾವತಿಸದೇ ಇರುವುದರಿಂದ ಮತ್ತು ನೋಂದಾಯಿತ ನೋಟಿಸ್‌ಗಳನ್ನು ನೀಡಲಾಗಿ / ತಲುಪದೇ ಹಿಂತಿರುಗಿರುವುದರಿಂದ ಅದೇ ಸಂಖ್ಯೆಯ ಅಡಿಯಲ್ಲಿ ಅಡವಿಡಲಾದ ಚಿನ್ನದ ಆಭರಣಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಸಾರ್ವಜನಿಕ ಹರಾಜು ಅಥವಾ ಖಾಸಗಿ ಒಪ್ಪಂದದಲ್ಲಿ ಬ್ಯಾಂಕಿನ ಆವರಣದಲ್ಲಿ ಕೆಳಗಿನ ದಿನಾಂಕದಂದು ಅಥವಾ ಇನ್ನಾವುದೇ ಅನುಕೂಲಕರ ದಿನಾಂಕದಂದು, ಅಡಮಾನದಾರರು ಅವುಗಳನ್ನು ಬಿಡಿಸಿಕೊಳ್ಳದೆ ಇದ್ದಲ್ಲಿ ಅದರ ಅಪಾಯ ಮತ್ತು ಜವಾಬ್ದಾರಿಯಲ್ಲಿ ಹೆಚ್ಚಿನ ಸೂಚನೆ ಕೊಡದೆ ಮಾರಾಟ ಮಾಡಲಾಗುವುದು. ಈ ಕೆಳಗಿನ ಖಾತೆಗಳ ಅಡಿಯಲ್ಲಿ ಅಡವಿಟ್ಟ ಚಿನ್ನದ ಆಭರಣಗಳ ಹರಾಜು ಮಾರತಹಳ್ಳಿ ಶಾಖೆಯಲ್ಲಿ ದಿನಾಂಕ 08.08.2025 ರ ಮಧ್ಯಾಹ್ನ 3.30 ಗಂಟೆಗೆ ನಡೆಯಲಿದೆ. ಇಎಂಡಿ ಮೊತ್ತ : ರೂ.5,000/-.

ಕ್ರ. ಸಂ	ಹೆಸರು	ಖಾತೆ ನಂ.	ಒಟ್ಟು ತೂಕ ಗ್ರಾಂ.ಗಳಲ್ಲಿ
1.	ಜಗದೀಶ್ ಎನ್	0491653000036614	101.5

ಯಾವುದೇ ಸಮಯದಲ್ಲಿ ಯಾವುದೇ ಕಾರಣವನ್ನು ನೀಡದೆ ಹರಾಜನ್ನು ರದ್ದುಗೊಳಿಸುವ/ ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

ದಿನಾಂಕ : 30.07.2025
ಸ್ಥಳ : ಬೆಂಗಳೂರು

ಸಹಿ/– ಹಿರಿಯ ಪ್ರಬಂಧಕರು
ದಿ ಸೌತ್ ಇಂಡಿಯನ್ ಬ್ಯಾಂಕ್ ಲಿ.

AFFDIDAVIT

I, VIHAAN K TALLAM, S/O KARTHIK TALLAM, Residing at #7, 3rd cross, shankarapuram, Bangalore South, Bangalore Karnataka-560004. Do hereby declare that I have changed my name from VIHAAN TALLAM to VIHAAN K TALLAM vide Affidavit Dated 25.07.2025 Sworn Before Notary: B M Chandrashekar.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ಶಾಖೆ: ಮರ್ಫಿ ಟೌನ್, ಬೆಂಗಳೂರು-560008.

ಸೂಚನೆ

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಮರ್ಫಿ ಟೌನ್ ಶಾಖೆಯ ಎಲ್ಲಾ ಹನಿ ಡಿಪಾಸಿಟ್ ಯೋಜನೆಯ ಠೇವಣಿದಾರರ ಹಾಗೂ ಸಾರ್ವಜನಿಕರ ಅವಗಾಹನೆಗೆ ತರಬಯಸುವುದೇನೆಂದರೆ, ನಮ್ಮ ಶಾಖೆಯಲ್ಲಿ ಹನಿ ಡಿಪಾಸಿಟ್ ಸಂಗ್ರಹಕಾರರಾಗಿದ್ದ ಶ್ರೀ ರಾಮಕೃಷ್ಣ ಕೆ.ವಿ. ಇವರೊಡನೆ ಮಾಡಿಕೊಂಡ ಕರಾರು ಒಡಂಬಡಿಕೆ ದಿನಾಂಕ 01.04.2025 ರಿಂದ ರದ್ದಾಗಿರುತ್ತದೆ. ಇನ್ನು ಮುಂದೆ ನಮ್ಮ ಬ್ಯಾಂಕಿನ ಪರವಾಗಿ ಹನಿ ಠೇವಣಿ ಸಂಗ್ರಹಿಸಲು ಸದರಿ ಶ್ರೀ ರಾಮಕೃಷ್ಣ ಕೆ.ವಿ. ರವರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಆದ್ದರಿಂದ ಇವರೊಡನೆ ಯಾರೇ ಆದರೂ ಹನಿ ಠೇವಣಿ ಪಾವತಿ ಇನ್ನಾವುದೇ ರೀತಿಯ ಹಣದ ವ್ಯವಹಾರ ಮಾಡಿದರೆ ನಮ್ಮ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ.

ನಮ್ಮ ಶಾಖೆಯ ಎಲ್ಲಾ ಹನಿ ಡಿಪಾಸಿಟ್ ಠೇವಣಿದಾರರು ಈ ಪ್ರಕಟಣೆಯ 30 ದಿವಸಗಳೊಳಗೆ ಮೂಲ ರಶೀದಿ ಹಾಗೂ ಇತರ ದಾಖಲಾತಿಗಳೊಂದಿಗೆ ಶಾಖಾ ಪ್ರಬಂಧಕರ ಮುಂದೆ ಸ್ವಯಂ ಹಾಜರಾಗಿ ವ್ಯವಹರಿಸಬೇಕೆಂದು ವಿನಂತಿಸುತ್ತೇವೆ.

ಮೇಲೆ ಹೇಳಿದ ಅವಧಿಯ ನಂತರ ಬರುವ ದೂರು, ಆಕ್ಷೇಪಣೆ ಹಾಗೂ ನಷ್ಟಗಳಿಗೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರಿ ಆಗಿರುವುದಿಲ್ಲ.

ದಿನಾಂಕ: 30.07.2025
ಸ್ಥಳ: ಬೆಂಗಳೂರು

ಶಾಖಾ ಪ್ರಬಂಧಕರ ಹೆಸರು: ಸಾಯಿ ಶ್ರೀನಿವಾಸ್ ಕೆ.
ಹಿರಿಯ ಶಾಖಾ ಪ್ರಬಂಧಕರು:
ಕರ್ನಾಟಕ ಬ್ಯಾಂಕ್ ಲಿಮಿಟೆಡ್
ಶಾಖೆ: ಮರ್ಫಿ ಟೌನ್, ಬೆಂಗಳೂರು.

ಇವೆಂಟ್ ಕಂಪನಿ ಪರ ಹಿರಿಯ ವಕೀಲ ಸಂಪತ್ ಕುಮಾರ್ ವಾದ

ಮಾಧ್ಯಮಗಳಿಗೆ ವರದಿ ಸಿಗುವುದಾದರೆ, ನಮಗೇಕೆ ನೀಡುವುದಿಲ್ಲ:ಡಿಎನ್‌ಎ

ಬೆಂಗಳೂರು: ಕಾಲ್ತುಳಿತ ಪ್ರಕರಣದ ಸಂಬಂಧ ದಾಖಲಾಗಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಮಾಡುವ ಆದೇಶದ ಮಾಹಿತಿಯನ್ನು ಪಕ್ಷಕಾರರಿಗೆ ಒದಗಿಸುವಂತೆ ನಿರ್ದೇಶಿಸಿ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರ ವಿಚಾರಣಾ ಆಯೋಗದ ವರದಿ ರದ್ದುಗೊಳಿಸುವಂತೆ ಕೋರಿರುವ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಮಂಗಳವಾರ ಮುಂದೂಡಿತು.

ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜಯಂತ್ ಬ್ಯಾನರ್ಜಿ ಮತ್ತು ಉಮೇಶ್ ಎಂ. ಅಡಿಗ ಅವರ ವಿಭಾಗೀಯ ಪೀಠ ನಡೆಸಿತು. ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠದ ಮುಂದೆ ಇಂದು ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಿಗದಿಯಾಗಿದೆ. ನ್ಯಾಯಮೂರ್ತಿ ಮೈಕಲ್ ಕುನ್ಹಾ ಅವರ ವಿಚಾರಣಾ ಆಯೋಗದ ವರದಿಯ ಬಗ್ಗೆ ಮಾಹಿತಿ ನೀಡಲಾಗುವುದು. ಹೀಗಾಗಿ,

ವಿಚಾರಣೆ ಮುಂದೂಡಬೇಕು ಎಂದು ಮನವಿ ಮಾಡಿದರು.

ಡಿಎನ್‌ಎ ಪ್ರತಿನಿಧಿಸಿದ್ದ ಹಿರಿಯ ವಕೀಲ ಸಂಪತ್ ಕುಮಾರ್ ಅವರು ಡಿಎನ್‌ಎ ಅಧಿಕಾರಿಗಳು ನೀಡಿರುವ ಹೇಳಿಕೆಯನ್ನು ನ್ಯಾ. ಕುನ್ಹಾ ಆಯೋಗ ತಪ್ಪಾಗಿ ದಾಖಲಿಸಿದೆ. ಇದಕ್ಕಾಗಿ ಅದರ ಪ್ರತಿ ನೀಡಬೇಕು ಎಂದು ಕೋರಿದ್ದೇವೆ. ಇದರ ಜತೆಗೆ ಡಿಎನ್‌ಎ ವಿರುದ್ಧ ಸಾಕ್ಷಿ ನುಡಿದಿರುವವರ ಪಾಟೀ ಸವಾಲಿಗೆ ವಿಚಾರಣಾ ಆಯೋಗದ ಕಾಯಿದೆಯಲ್ಲಿ ಅವಕಾಶವಿದೆ. ಅದಕ್ಕೂ ಅನುಮತಿ ಕೋರಿದ್ದೇವೆ. ಈ ಎರಡು ಮನವಿಗಳನ್ನು ನ್ಯಾ. ಕುನ್ಹಾ ಅವರು ಪರಿಗಣಿಸಿಲ್ಲ. ಇದಕ್ಕೆ ಪೂರಕವಾಗಿ ಇಡೀ ಪ್ರಕ್ರಿಯೆ ವಿಡಿಯೊ ರೆಕಾರ್ಡ್ ಮಾಡಲಾಗಿದೆ. ಅದನ್ನು ತರಿಸಿ ನ್ಯಾಯಾಲಯ ಪರಿಶೀಲಿಸಬಹುದು. ಹೀಗಾಗಿ, ಸ್ವಾಭಾವಿಕ ನ್ಯಾಯತತ್ವ ಉಲ್ಲಂಘನೆಯಾಗಿರುವುದರಿಂದ ಅರ್ಜಿ ವಜಾ ಮಾಡಬೇಕು ಎಂದು ಕೋರಿದರು.

ಆ.5ಕ್ಕೆ ವಿಚಾರಣೆ ಮುಂದೂಡಿಕೆ

ನ್ಯಾ. ಕುನ್ಹಾ ವರದಿ ಆಧರಿಸಿ ಮಾಧ್ಯಮಗಳು ಡಿಎನ್‌ಎ ಅಧಿಕಾರಿಗಳ ಫೋಟೊ ಸಮೇತ ಸುದ್ದಿ ಪ್ರಕಟಿಸಿವೆ. ಇದರಿಂದ ಅವರ ಘನತೆಗೆ ಧಕ್ಕೆಯಾಗಿದೆ. ಮಾಧ್ಯಮಗಳಿಗೆ ನ್ಯಾ. ಕುನ್ಹಾ ಆಯೋಗದ ವರದಿ ಸಿಗಬಹುದಾದರೆ ನಮಗೇಕೆ ನೀಡಲಾಗುವುದಿಲ್ಲ? ಆರ್‌ಟಿಐ ಅಡಿಯೂ ಎರಡು ಅರ್ಜಿ ಹಾಕಿದ್ದು, ಅದಕ್ಕೂ ಉತ್ತರ ಸಿಕ್ಕಿಲ್ಲ ಎಂದರು. ಸುದೀರ್ಘವಾಗಿ ವಾದ ಪ್ರತಿವಾದ ಆಲಿಸಿದ ಪೀಠವು ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ನ್ಯಾಯಾಲಯ ಮಾಡುವ ಆದೇಶ ಮುಂದಿನ ವಿಚಾರಣೆಯಲ್ಲಿ ತಿಳಿಸುವಂತೆ ನಿರ್ದೇಶಿಸಿ, ವಿಚಾರಣೆ ಆ. 5ಕ್ಕೆ ಮುಂದೂಡಿತು.

ಜನತಾ ಸೇವಾ ಬ್ಯಾಂಕ್ 15.31 ಕೋಟಿ ಲಾಭ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ 44ನೇ ಸರ್ವ ಸದಸ್ಯರ ಮಹಾಸಭೆ ನಡೆಯಿತು.

ಬೆಂಗಳೂರು: ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪ್ರಸ್ತಕ ವರ್ಷ 15.31 ಕೋಟಿ ರು. ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎಚ್.ಸಿ.ಗೋಪಾಲ್ ಹೇಳಿದರು.

ಬ್ಯಾಂಕಿನ 44ನೇ ಸರ್ವ ಸದಸ್ಯರ ಮಹಾಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಇಡೀ ರಾಜ್ಯದಲ್ಲಿಯೇ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕಿನ ದುಡಿಯುವ ಬಂಡವಾಳ 1,533.13 ಕೋಟಿ ರು.ಗಳಿದ್ದು, ಒಟ್ಟು ಷೇರು ಬಂಡವಾಳ 36.68 ಕೋಟಿ, ನಿಧಿಗಳು 121.92 ಕೋಟಿ, 693.46 ಕೋಟಿ ಹೂಡಿಕೆ, 1,237.90 ಕೋಟಿ ಠೇವಣಿಗಳಿದೆ. ಸದರಿ ಸಾಲಿನಲ್ಲಿ 726.16 ಕೋಟಿ ಸಾಲ ವಿತರಿಸಿದ್ದು, 56.31 ಕೋಟಿ ಎನ್‌ಪಿಎ, ನಿವ್ವಳ ಎನ್‌ಪಿಎ ಶೇಖಡ ಶೂನ್ಯವಾಗಿದೆ. ಒಟ್ಟು 20.69 ಕೋಟಿಗಳ ಲಾಭಗಳಿಸಿದ್ದು, 5.38 ಕೋಟಿ ಆದಾಯ ತೆರಿಗೆ ಪಾವತಿಸಿ, 15.31 ಕೋಟಿ ನಿವ್ವಳ ಲಾಭ ಹೊಂದಿದೆ ಎಂದು ತಿಳಿಸಿದರು. ಸಭೆಯಲ್ಲಿ ಉಪಾಧ್ಯಕ್ಷ ಡಾ.ಪಿ.ಎಲ್. ವೆಂಕಟೇಶ್‌ಮೂರ್ತಿ ಸೇರಿದಂತೆ ಆಡಳಿತ ಮಂಡಳಿಯ ಪದಾಧಿಕಾರಿಗಳು ಭಾಗವಹಿಸಿದ್ದರು.

ದರ್ಶನ್ ಫ್ಯಾನ್ಸ್ ವಿರುದ್ಧ ನಟ ದೂರು

ಬೆಂಗಳೂರು: ನಟ ದರ್ಶನ್ ಅಭಿಮಾನಿಗಳು ಅಶ್ಲೀಲವಾಗಿ ಸಂದೇಶ ಕಳುಹಿಸಿದ ಆರೋಪದಡಿ ನಟಿ ರಮ್ಯಾ ಪೊಲೀಸ್ ಠಾಣೆ ಮೆಟ್ಟಿಲೇರಿದ್ದ

ಬೆನ್ನಲ್ಲೇ ನಟ ಪ್ರಥಮ್ ಕೂಡ ದೂರು ನೀಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್ಪಿ ಸಿ.ಕೆ. ಬಾಬಾ ಅವರನ್ನು ಭೇಟಿಯಾಗಿ ಪ್ರಥಮ್ ದೂರು ನೀಡಿದರು. ನಟ ದರ್ಶನ್ ಅವರೊಂದಿಗೆ ಜೈಲಿನ ಒಂದೇ ಬ್ಯಾರಕ್‌ನಲ್ಲಿದ್ದ ವ್ಯಕ್ತಿಯೊಬ್ಬ ನನ್ನನ್ನು ಉದ್ದೇಶಿಸಿ ಬಾಸ್ (ದರ್ಶನ್) ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತೀಯಾ ಎಂದು ಹೇಳಿ ಡ್ರ್ಯಾಗರ್ ಹಾಗೂ ಚಾಕು ತೋರಿಸಿ ಚುಚ್ಚಲು ಯತ್ನಿಸಿದ್ದಾರೆ ಎಂದು ಪ್ರಥಮ್ ದೂರಿನಲ್ಲಿ ಆರೋಪಿಸಿದ್ದಾರೆ.

500ಕ್ಕೂ ಹೆಚ್ಚು ಪೇಜ್‌ಗಳಿಂದ ತೇಜೋವಧೆ: ಈ ಬೆಳವಣಿಗೆ ನಡುವೆ ದರ್ಶನ್ ಅವರ ಅಧಿಕೃತ ಫ್ಯಾನ್ ಪೇಜ್ ಡಿ ಡೈನಾಸ್ಟಿ, ಡಿ ಕಿಂಗ್ ಡಮ್, ಡಿ ಯೂನಿವರ್ಸ್ ಮತ್ತು ಡೆವಿಲ್ ಕಿಂಗ್ ಡಮ್ ಸೇರಿದಂತೆ 500ಕ್ಕೂ ಹೆಚ್ಚು ಇನ್ ಸ್ಟಾಗ್ರಾಮ್ ಪೇಜ್‌ಗಳಿಂದ ನನ್ನ ವೈಯಕ್ತಿಕ ತೇಜೋವಧೆಗೆ ಇಳಿದಿದ್ದಾರೆ. ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ನನಗೆ ಜೀವಭಯವಿದ್ದು ರಕ್ಷಣೆಯ ಅಗತ್ಯವಿದೆ. ಘಟನೆ ಸಂಬಂಧ ಒಂದು ವಾರದಿಂದ ನನಗೆ ತೊಂದರೆ ಮಾಡಿದ್ದವರ ಬಗ್ಗೆ ಬುದ್ಧಿ ಹೇಳಿಸಿ ರಾಜಿಯಾಗಲು ದರ್ಶನ್ ಆಪ್ತರು ಪ್ರಯತ್ನಿಸಿದ್ದಾರೆ ಎಂದು ದೂರಿನಲ್ಲಿ ಪ್ರಥಮ್ ತಿಳಿಸಿದ್ದಾರೆ.

ಚಿನ್ನಾಭರಣ ಕದ್ದು ಮಾರಾಟ: ನಾಲ್ವರ ಸೆರೆ

ಬೆಂಗಳೂರು: ಚಿಕ್ಕಪ್ಪನ ಮನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿ ಬಂದ ಹಣದಿಂದ ಮೋಜುಮಸ್ತಿ ಮಾಡುತ್ತಿದ್ದ ಸಂಬಂಧಿ ಸೇರಿದಂತೆ ನಾಲ್ವರನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೈರತಿ ಗ್ರಾಮದ ನಿವಾಸಿ ಶ್ರೀನಿವಾಸ್ ರೆಡ್ಡಿ ನೀಡಿದ ದೂರು ಆಧರಿಸಿ ಅವರ ಸಂಬಂಧಿಯಾದ ಯುವತಿ ಮತ್ತು ಆಕೆಯ ಮೂವರು ಸ್ನೇಹಿತರನ್ನು ಬಂಧಿಸಲಾಗಿದೆ. ಬಂಧಿತರಿಂದ 65 ಲಕ್ಷ ಮೌಲ್ಯದ 548 ಗ್ರಾಂ ಚಿನ್ನ ಹಾಗೂ 10 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಸದ್ಯ ಆರೋಪಿಗಳು ಜಾಮೀನು ಪಡೆದು ಹೊರಬಂದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಬಂಧಿತ ಆರೋಪಿಗಳೆಲ್ಲರೂ ಖಾಸಗಿ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿಗಳಾಗಿದ್ದು, ಕೊತ್ತನೂರು ಸುತ್ತಮುತ್ತಲಿನ ನಿವಾಸಿಗಳಾಗಿದ್ದಾರೆ. ಈ ಪೈಕಿ ಯುವತಿಯ ಕುಟುಂಬವು ಚಿಕ್ಕಪ್ಪ ಶ್ರೀನಿವಾಸ್ ರೆಡ್ಡಿ ಮನೆ ಮುಂದೆ ವಾಸವಾಗಿತ್ತು. ಮೋಜು ಮಸ್ತಿ ಮಾಡಲು ಹಣದ ಕೊರತೆ ಇದ್ದಿದ್ದರಿಂದ ಕಳ್ಳತನಕ್ಕಾಗಿ ಸ್ನೇಹಿತರ ಅಣತಿಯಂತೆ ಯುವತಿಯು ಕಳೆದ ಜನವರಿಯಿಂದಲೇ ಹಂತ-ಹಂತವಾಗಿ ಮನೆಯಲ್ಲಿದ್ದ ಚಿನ್ನಾಭರಣ ಕಳವು ಮಾಡಿದ್ದಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕದ್ದ ಚಿನ್ನಾಭರಣ ಸ್ವೀಕರಿಸಿದ ಮೂವರು ಆರೋಪಿಗಳು ಚಿನ್ನದ ಗಟ್ಟಿಯಾಗಿ ಮಾರ್ಪಡಿಸಿ ಅದನ್ನು ಚಿಕ್ಕಪೇಟೆಯ ಆಭರಣದ ಅಂಗಡಿಯೊಂದರಲ್ಲಿ ಮಾರಾಟ ಮಾಡಿದ್ದರು. ಬಂದ ಹಣದಿಂದ ಗೋವಾಗೆ ತೆರಳಿ ಮೋಜು ಮಸ್ತಿ ಮಾಡಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಸಜಿಲಿಟಿ ಇಂಡಿಯಾ ಲಿಮಿಟೆಡ್

sagility™

(ಹಿಂದೆ ಸಜಿಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್)
ಕಾರ್ಪೊರೇಟ್ ಐಡೆಂಟಿಫಿಕೇಷನ್ ಸಂಖ್ಯೆ: L72900KA2021PLC150054
ನೋಂದಾಯಿತ ಕಚೇರಿ – ನಂ. 23 ಮತ್ತು 24, ಎಎಂಆರ್ ಟೆಕ್ ಪಾರ್ಕ್, ಬಿಲ್ಡಿಂಗ್ 2ಎ, ಮೊದಲ ಮಹಡಿ, ಹೊಂಗಸಂದ್ರ ಗ್ರಾಮ, ಹೊಸೂರು ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು – 560068, ಕರ್ನಾಟಕ, ಭಾರತ
ದೂರವಾಣಿ ಸಂಖ್ಯೆ: 080–71251500, **ವೆಬ್‌ಸೈಟ್:** https://sagilityhealth.com/

4ನೇ ವಾರ್ಷಿಕ ಪ್ರಧಾನ ಸಭೆಯ ಸೂಚನೆ

ಸಜಿಲಿಟಿ ಇಂಡಿಯಾ ಲಿಮಿಟೆಡ್ ("ಕಂಪನಿ") ನ ಸದಸ್ಯರ 4ನೇ ವಾರ್ಷಿಕ ಪ್ರಧಾನ ಸಭೆ ("ಎಜಿಎಂ") 2025ರ ಆಗಸ್ಟ್ 21, ಗುರುವಾರ ಸಂಜೆ 4 ಗಂಟೆಗೆ ಐಎಸ್‌ಟಿ (IST) ಸಮಯದಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ("VC") ಮೂಲಕ ನಡೆಯಲಿದ್ದು, ಕಂಪನಿಗಳ ಕಾಯಿದೆ, 2013 ("ಕಾಯಿದೆ"), ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆಗಳಾದ 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020, ಮತ್ತು 09/2024 ದಿನಾಂಕ ಸೆಪ್ಟೆಂಬರ್ 19, 2024, ಹಾಗೂ ಸೆಕ್ಯುರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಹೊರಡಿಸಿದ ಸುತ್ತೋಲೆ ಸಂಖ್ಯೆಗಳಾದ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024 ಮತ್ತು SEBI/HO/CFD/PoD2/CIR/P/0155 ದಿನಾಂಕ ನವೆಂಬರ್ 11, 2024 (ಒಟ್ಟಾಗಿ ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ) ಮತ್ತು ಎಲ್ಲಾ ಇತರ ಅನ್ವಯವಾಗುವ ಕಾನೂನುಗಳ ಅನುಸಾರವಾಗಿ, ಎಜಿಎಂ ಸೂಚನೆಯಲ್ಲಿ ನಿಗದಿಪಡಿಸಲಾದ ವ್ಯವಹಾರಗಳನ್ನು ನಿರ್ವಹಿಸಲು ಈ ಸಭೆಯನ್ನು ನಡೆಸಲಾಗುವುದು.

ಮೇಲೆ ತಿಳಿಸಿದ ಸುತ್ತೋಲೆಗಳು ಮತ್ತು ಎಲ್ಲಾ ಇತರ ಅನ್ವಯವಾಗುವ ಕಾನೂನುಗಳ ಪ್ರಕಾರ, 4ನೇ ಎಜಿಎಂ ಸೂಚನೆ, ಇ-ವೋಟಿಂಗ್ ಕಾರ್ಯವಿಧಾನ ಮತ್ತು ಸೂಚನೆಗಳು ಹಾಗೂ ಹಣಕಾಸು ವರ್ಷ 2024-25ರ ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು 2025 ಜುಲೈ 25 ರಂದು ಡೆಪಾಸಿಟರಿಗಳಲ್ಲಿ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿದ ಎಲ್ಲಾ ಸದಸ್ಯರಿಗೆ 2025 ಜುಲೈ 29, ಮಂಗಳವಾರದಂದು ಕಳುಹಿಸಲಾಗಿದೆ.

ಇದಲ್ಲದೆ, ಸೆಬಿ (ಲಿಸ್ಟಿಂಗ್ ಅಬಿಲಿಗೇಷನ್ ಅಂಡ್ ಡಿಸ್ ಕ್ಲೋಶರ್ ರಿಕ್ವಯರ್ಮೆಂಟ್ಸ್) ನಿಯಮಾವಳಿಗಳು, 2015 ("ಲಿಸ್ಟಿಂಗ್ ನಿಯಮಾವಳಿಗಳು") ನ ನಿಯಮ 36 (1)(b) ರ ಪ್ರಕಾರ, ವಾರ್ಷಿಕ ವರದಿಯ ಸಂಪೂರ್ಣ ವಿವರಗಳು ಲಭ್ಯವಿರುವ ವೆಬ್-ಲಿಂಕ್ ಅನ್ನು ನಿಖರವಾದ ಪಾಥ್ ಸಹಿತ, ಕಂಪನಿಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರಿಗೆ ಪತ್ರ ದ ಮೂಲಕ ಕಳುಹಿಸಲಾಗಿದೆ.

4ನೇ ಎಜಿಎಂನ ಸೂಚನೆ ಮತ್ತು ಹಣಕಾಸು ವರ್ಷ 2024-25ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ https://sagilityhealth.com/wp-content/uploads/2025/07/Annual-Report-2024-25.pdf ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ (BSE) ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಕ್ರಮವಾಗಿ www.bseindia.com ಮತ್ತು www.nseindia.com ನಲ್ಲಿ, ಮತ್ತು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ), ಎಮ್‌ಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ https://instavote.linkintime.co.in/ ನಲ್ಲಿ ಸಹ ಲಭ್ಯವಿದೆ. 2025ರ ಜುಲೈ 25 ರ ನಂತರ ಕಂಪನಿಯ ಷೇರುಗಳನ್ನು ಖರೀದಿಸುವ ಷೇರುದಾರರು ನಮ್ಮ ಆರ್‌ಟಿಎಗೆ ಬರೆಯಬಹುದು ಅಥವಾ ವಾರ್ಷಿಕ ವರದಿ ಮತ್ತು ಎಜಿಎಂ ಸೂಚನೆಯನ್ನು ಪ್ರವೇಶಿಸಲು ಮೇಲಿನ ವೆಬ್ ಲಿಂಕ್‌ಗಳನ್ನು ಉಲ್ಲೇಖಿಸಬಹುದು. ಇದರಲ್ಲಿ ಸಭೆಗೆ ಹಾಜರಾಗಲು ಮತ್ತು ಇ-ವೋಟಿಂಗ್‌ನಲ್ಲಿ ಭಾಗವಹಿಸಲು ಲಾಗಿನ್ ರುಜುವಾತುಗಳು ಮತ್ತು ಸೂಚನೆಗಳು ಸೇರಿವೆ.

ಕಂಪನಿಯು ತನ್ನ ಸದಸ್ಯರಿಗೆ 4ನೇ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರಗಳ ಮೇಲೆ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂನಲ್ಲಿ ಇ-ವೋಟಿಂಗ್ ಎರಡರ ಮೂಲಕವೂ ಎಲೆಕ್ಟ್ರಾನಿಕ್ ವಿಧಾನದಿಂದ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸುತ್ತಿದೆ. ಸದಸ್ಯರು ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ಸಂಬಂಧಪಟ್ಟ ಡೆಪಾಸಿಟರಿಗಳಲ್ಲಿ ತಮ್ಮ ಡಿಪಿ ಮೂಲಕ ನೋಂದಾಯಿಸುವಂತೆ ವಿನಂತಿಸಲಾಗಿದೆ.

ಕಟ್-ಆಫ್ ದಿನಾಂಕದಂದು, ಅಂದರೆ 2025ರ ಆಗಸ್ಟ್ 14, ಗುರುವಾರ, ಡೆಪಾಸಿಟರಿಗಳು ನಿರ್ವಹಿಸುವ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರುಗಳು ಇರುವ ಸದಸ್ಯರು ಮಾತ್ರ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಬಳಸಿಕೊಳ್ಳಲು ಅಥವಾ ಎಜಿಎಂನಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ರಿಮೋಟ್ ಇ-ವೋಟಿಂಗ್ 2025ರ ಆಗಸ್ಟ್ 18, ಸೋಮವಾರದಂದು ಬೆಳಿಗ್ಗೆ 9 ಗಂಟೆಗೆ ಭಾರತೀಯ ಕಾಲಮಾನದಲ್ಲಿ ಪ್ರಾರಂಭವಾಗಿ, 2025ರ ಆಗಸ್ಟ್ 20, ಬುಧವಾರದಂದು ಸಂಜೆ 5 ಗಂಟೆಗೆ ಭಾರತೀಯ ಕಾಲಮಾನದಲ್ಲಿ ಕೊನೆಗೊಳ್ಳುತ್ತದೆ. 2025ರ ಆಗಸ್ಟ್ 20, ಬುಧವಾರದಂದು ಸಂಜೆ 5 ಗಂಟೆ ಭಾರತೀಯ ಕಾಲಮಾನದ ನಂತರ ರಿಮೋಟ್ ಇ-ವೋಟಿಂಗ್‌ಗೆ ಅವಕಾಶವಿರುವುದಿಲ್ಲ ಮತ್ತು ಸದಸ್ಯರು ಒಂದು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.

ಎಜಿಎಂಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಎಜಿಎಂಗೆ ಹಾಜರಾಗಬಹುದು. ಆದರೆ, ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸದ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಎಜಿಎಂನಲ್ಲಿ ಹಾಜರಿರುವ ಸದಸ್ಯರು ಎಜಿಎಂನಲ್ಲಿ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಕಟ್-ಆಫ್ ದಿನಾಂಕದಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಇಕ್ವಿಟಿ ಷೇರುಗಳ ಅನುಪಾತದಲ್ಲಿ ಷೇರುದಾರರ ಮತದಾನದ ಹಕ್ಕುಗಳು ಇರುತ್ತವೆ. ವಿಡಿಯೋ ಕಾನ್ಫರೆನ್ಸಿಂಗ್ (VC) ಸೌಲಭ್ಯದ ಮೂಲಕ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 103ರ ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ವಿಡಿಯೋ ಕಾನ್ಫರೆನ್ಸಿಂಗ್ (VC) ಮೂಲಕ ಭಾಗವಹಿಸುವ ಸೂಚನೆಗಳು ಮತ್ತು ಇ-ವೋಟಿಂಗ್ ಪ್ರಕ್ರಿಯೆ, ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಇ-ವೋಟಿಂಗ್ ಮೂಲಕ ಹೇಗೆ ಮತ ಚಲಾಯಿಸಬಹುದು ಎಂಬುದು 4ನೇ ಎಜಿಎಂ ಸೂಚನೆಯ ಭಾಗವಾಗಿ ಒದಗಿಸಲಾಗಿದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು https://instavote.linkintime.co.in (ಸಹಾಯ ವಿಭಾಗದ ಅಡಿಯಲ್ಲಿ) ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ investorservices@sagilityhealth.com ಅಥವಾ enotices@in.mpms.mufg.com ಗೆ ಇ-ಮೇಲ್ ಬರೆಯಬಹುದು ಅಥವಾ ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಶ್ರೀ ರಾಜೀವ್ ರಂಜನ್, ಸಹಾಯಕ ಉಪಾಧ್ಯಕ್ಷ - ಇ-ವೋಟಿಂಗ್ ತಂಡ ಅಥವಾ ಶ್ರೀ ಆಶಿಶ್ ಉಪಾಧ್ಯಾಯ, ಸಹಾಯಕ – ಇ-ವೋಟಿಂಗ್ ತಂಡವನ್ನು +91 22 4918 6000 ಸಂಖ್ಯೆಗೆ, ವಿಳಾಸ - C-101, ಎಂಬೆಸಿ 247, ಎಲ್.ಬಿ.ಎಸ್. ಮಾರ್ಗ್, ವಿಕ್ರೋಲಿ (ಪಶ್ಚಿಮ), ಮುಂಬೈ – 400 083. ಇಲ್ಲಿ ಸಂಪರ್ಕಿಸಬಹುದು. ಸದಸ್ಯರು ಸೂಚನೆಯಲ್ಲಿ ಮತ್ತು ನಿರ್ದಿಷ್ಟವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಒಳಗೊಂಡಂತೆ ಎಲ್ಲಾ ಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ.

ಸಜಿಲಿಟಿ ಇಂಡಿಯಾ ಲಿಮಿಟೆಡ್ ಪರವಾಗಿ
(ಈ ಹಿಂದೆ ಸಜಿಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್)
ಸಹಿ/-
ಸತೀಶ್‌ಕುಮಾರ್ ಸಖರಾಯಪಟ್ಟಣ ಸೀತಾರಾಮಯ್ಯ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ಎಂ.ನಂ. ಎ16008

ಜುಲೈ 30, 2025
ಬೆಂಗಳೂರು

CONCEPT

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್

happiest minds
The Mindful IT Company
Born Digital . Born Agile

CIN : L72900KA2011PLC057931
ನೋಂದಾಯಿತ ಕಛೇರಿ: 53/1-4, ಹೊಸೂರು ಮುಖ್ಯ ರಸ್ತೆ, ಮಡಿವಾಳ, (ಮಡಿವಾಳ ಪೋಲೀಸ್ ಸ್ಟೇಷನ ಪಕ್ಕದಲ್ಲಿ)
ಬೆಂಗಳೂರು – 560 068, ಕರ್ನಾಟಕ, ಭಾರತ Website: www.happiestminds.com, Email: IR@happiestminds.com, Tel: +91 80 6196 0300

ಜೂನ್ 30, 2025ಕ್ಕೆ ಕೊನೆಯಾದ ತ್ರೈಮಾಸಿಕದ ವಿಸ್ತೃತ ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಲಕ್ಷ ರೂಗಳಲ್ಲಿ)

ವಿವರಗಳು	30.06.2025 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2025 ಕ್ಕೆ ಕೊನೆಯಾದ ತ್ರೈಮಾಸಿಕ (ಟಿಪ್ಪಣಿ 2ಅನ್ನು ನೋಡಿ)	30.06.2024 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2025 ಕ್ಕೆ ಕೊನೆಯಾದ ವರ್ಷ (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	54,990	54,457	46,382	2,06,084
ಸದರಿ ಅವಧಿಗೆ ನಿವ್ವಳ ಲಾಭ (ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳಿಗೆ ಮುನ್ನ)	7,687	6,254	6,841	26,762
ಸದರಿ ಅವಧಿಗೆ ನಿವ್ವಳ ಲಾಭ (ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು)	7,687	5,038	6,841	25,546
ಸದರಿ ಅವಧಿಗೆ ತೆರಿಗೆ ಕಳೆದ ನಂತರ ನಿವ್ವಳ ಲಾಭ (ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು)	5,713	3,400	5,103	18,466
ಸದರಿ ಅವಧಿಗೆ ಒಟ್ಟು ಸಮಗ್ರ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು) ಸೇರಿದಂತೆ]	5,790	3,853	5,146	17,857
ಪೇಯ್ಡಪ್ ಇಕ್ವಿಟಿ ಷೇರು ಬಂಡವಾಳ (ತಲಾ 2 ರೂ.)	3,003	3,001	2,991	3,001
ಮೀಸಲುಗಳು (ಮರುಮೌಲ್ಯಮಾಪನ ಮೀಸಲು ಬಿಟ್ಟು)	69,809	63,875	54,888	63,875
ಸೆಕ್ಯುರಿಟೀಸ್ ಪ್ರೀಮಿಯಮ್ ಖಾತೆ	90,619	90,582	90,389	90,582
ನಿವ್ವಳ ಮೌಲ್ಯ	1,63,431	1,57,458	1,48,268	1,57,458
ಪೇಯ್ಡಪ್ ಋಣ ಬಂಡವಾಳ / ಬಾಕಿ ಇರುವ ಋಣ	1,19,207	1,16,090	1,25,405	1,16,090
ಬಾಕಿ ಇರುವ ರಿಡೀಮಬಲ್ ಪ್ರಿಫರೆನ್ಸ್ ಷೇರುಗಳು	NA	NA	NA	NA
ಡೆಟ್ ಇಕ್ವಿಟಿ ಅನುಪಾತ	0.78	0.79	0.90	0.79
ತಲಾ ಷೇರಿಗೆ ಗಳಿಕೆ (ಮುಖ ಬೆಲೆ ತಲಾ 2 ರೂ.)				
– ಮೂಲ (ತ್ರೈಮಾಸಿಕಗಳಲ್ಲಿ ವಾರ್ಷಿಕೀಕರಿಸಿಲ್ಲ)	3.79	2.26	3.39	12.26
– ಡೈಲ್ಯೂಟೆಡ್ (ತ್ರೈಮಾಸಿಕಗಳಲ್ಲಿ ವಾರ್ಷಿಕೀಕರಿಸಿಲ್ಲ)	3.79	2.26	3.39	12.26
ಬಂಡವಾಳ ವಿಮೋಚನಾ ಮೀಸಲು	NA	NA	NA	NA
ಡಿಬೆಂಚರ್ ವಿಮೋಚನಾ ಮೀಸಲು	NA	NA	NA	NA
ಸಾಲ ತೀರಿಕೆ ಕವರೇಜ್ ಅನುಪಾತ	5.32	5.81	7.73	6.31
ಬಡ್ಡಿ ತೀರಿಕೆ ಕವರೇಜ್ ಅನುಪಾತ	4.24	3.63	4.93	3.94

ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಕೆಳಗೆ ನೀಡಲಾಗಿದೆ:

ವಿವರಗಳು	30.06.2025 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2025 ಕ್ಕೆ ಕೊನೆಯಾದ ತ್ರೈಮಾಸಿಕ (ಟಿಪ್ಪಣಿ 2ಅನ್ನು ನೋಡಿ)	30.06.2024 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2025 ಕ್ಕೆ ಕೊನೆಯಾದ ವರ್ಷ (ಪರಿಶೋಧಿತ)
(ಎ) ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	43,113	45,408	39,855	1,64,894
(ಬಿ) ತೆರಿಗೆಗೆ ಮುನ್ನ ಲಾಭ	5,503	6,193	5,982	21,327
(ಸಿ) ತೆರಿಗೆಯ ನಂತರದ ಲಾಭ	4,058	5,776	4,384	16,856

ಟಿಪ್ಪಣಿಗಳು:

1. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು 2015 ರ ನಿಬಂಧನೆ 33 ಮತ್ತು 52 ರ ಪ್ರಕಾರ ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ ("ಹೋಲ್ಡಿಂಗ್ ಕಂಪನಿ" ಅಥವಾ "ಕಂಪನಿ") ಮತ್ತು ಅದರ ಅಧೀನಸಂಸ್ಥೆಗಳ (ಒಟ್ಟಾಗಿ "ಸಮೂಹ" ಎಂದು ಉಲ್ಲೇಖಿಸಲಾಗುತ್ತದೆ); ಜೂನ್ 30, 2025 ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಸಂಚಿತ ಆರ್ಥಿಕ ಫಲಿತಾಂಶಗಳ ("ಸಂಚಿತ ಆರ್ಥಿಕ ಫಲಿತಾಂಶಗಳು") ಇದನ್ನು ಜುಲೈ 29, 2025 ರಂದು ನಡೆದ ನಿರ್ದೇಶಕರ ಮಂಡಳಿ ತನ್ನ ಸಭೆಯಲ್ಲಿ ಅನುಮೋದಿಸಿದೆ.
2. ಮಾರ್ಚ್ 31, 2015 ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಂಕಿ-ಅಂಶಗಳು: ಮಾರ್ಚ್ 31, 2025 ರವರೆಗಿನ ಪೂರ್ಣ ವರ್ಷದ ಪರಿಶೋಧಿತ ಅಂಕಿ-ಅಂಶಗಳನ್ನು ಹಣಕಾಸು ವರ್ಷದ ಮೂರನೇ ತ್ರೈಮಾಸಿಕದ ಕೊನೆಯ ದಿನಾಂಕವಾದ ಡಿಸೆಂಬರ್ 31, 2024 ರವರೆಗಿನ ವರ್ಷದ ಅಪರಿಶೋಧಿತ ಪ್ರಕಟಿತ ಅಂಕಿ-ಅಂಶಗಳ ಜೊತೆ ಸರಿತೂಗಿಸಿ ನೀಡಿರುವ ಅಂಕಿ-ಅಂಶಗಳಾಗಿರುತ್ತವೆ. ಡಿಸೆಂಬರ್ 31, 2024 ರವರೆಗಿನ ವರ್ಷದ ಪ್ರಕಟಿತ ಫಲಿತಾಂಶಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಸೀಮಿತವಾಗಿ ಪರಿಶೀಲಿಸಿದ್ದಾರೆ.
3. ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ರ ನಿಬಂಧನೆ 33 ಹಾಗೂ ನಿಬಂಧನೆ 52 ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ವಿಸ್ತೃತ ರೂಪದ ಸಾರಾಂಶವಾಗಿರುತ್ತದೆ. ಈ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ಪಾಠ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜುಗಳ ಎಂದರೆ www.bseindia.com ಹಾಗೂ www.nseindia.com ವೆಬ್‌ಸೈಟ್‌ಗಳಲ್ಲಿಯೂ ಮತ್ತು ಕಂಪನಿಯ www.happiestminds.com ವೆಬ್‌ಸೈಟಿನಲ್ಲಿಯೂ ಲಭ್ಯವಿರುತ್ತವೆ. ಈ ಆರ್ಥಿಕ ಫಲಿತಾಂಶಗಳ ಸಾರಾಂಶದ ಹೇಳಿಕೆಯನ್ನು ಕೆಳಗಿನ QR ಕೋಡ್ ಅನ್ನು ಸ್ಕ್ಯಾನ್ ಮಾಡವ ಮೂಲಕ ನೋಡಬಹುದು.

ಸ್ಥಳ: ಬೆಂಗಳೂರು, ಭಾರತ
ದಿನಾಂಕ: ಜುಲೈ 29, 2025

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್‌ಗಾಗಿ
ಸಹಿ/–
ಮ್ಯಾನೇಜಿಂಗ್ ಡೈರೆಕ್ಟರ್

ಮಾನ್ಯ ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ.

ಸಿ.ಮಿಸ್ ನಂ:533/2024

ಅರ್ಜಿದಾರರು: ಸಿದ್ದಪ್ಪ ಬಿನ್ ಲೇಟ್ ಈರಯ್ಯ ವಯಸ್ಸು 90 ವರ್ಷಗಳು ಅಳ್ಳಿಮಾರನಹಳ್ಳಿ ಗ್ರಾಮ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ. 2. ಗ್ರಾಮಲೆಕ್ಕಾಧಿಕಾರಿಗಳು, ಮಲ್ಲಿಗೆ ಮೆಟ್ಲು ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ

ಅರ್ಜಿದಾರರು, ಕನಕಪುರ ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯಾದ ಈರಯ್ಯ ಬಿನ್ ದೊಡ್ಡಈರಯ್ಯ ರವರು ದಿನಾಂಕ. 10-02-1973 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಮಲ್ಲಿಗೆ ಮೆಟ್ಲು ದಾಖಲೆ, ಬೈರೇಗೌಡನದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣೆ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಈರಯ್ಯ ಬಿನ್ ದೊಡ್ಡಈರಯ್ಯ ರವರ ಮರಣ ಸಂಬಂಧ ಸಾರ್ವಜನಿಕವಾಗಿಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ.06-09-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಭ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು.

ಈ ದಿನ ಅಂದರೆ 23ನೇ /ಜುಲೈ/2೦5 ರಂದು ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.

ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.23-07-2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್ ನಂ: 235/2025

ಅರ್ಜಿದಾರರು: ಶ್ರೀಮತಿ. ನಂಜಮ್ಮ

ವಿರುದ್ಧ

ಎದುರುದಾರರು: ಶ್ರೀ. ಶಿವನಂಜಯ್ಯ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಹಾಗೂ 1ನೇ ಮತ್ತು 2ನೇ ಎದುರುದಾರರ ತಂದೆಯಾದ ನಂಜಯ್ಯ @ ನಂಜೇಗೌಡ ಇವರು ದಿನಾಂಕ: 23.05.2003 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ಹೊಸಗಬ್ಬಾಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ 3ನೇ ಮತ್ತು 4ನೇ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿರುವುದು ಸರಿಯಷ್ಟೆ, ಇವರ ಮರಣದ ದಿನಾಂಕದ ಬಗ್ಗೆ ಯಾರಿಗಾದರು ತಕರಾರು ಇದ್ದಲ್ಲಿ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖ್ಯಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 06/09/2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆ ಸಮಯಕ್ಕೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ, ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 29ನೇ ಜುಲೈ 2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಅರ್ಜಿದಾರರ ಪರ ವಕೀಲರು
ಬಿ.ವಿ ನಾಗೇಶ್
ವಕೀಲರು
ಕನಕಪುರ.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್ ನಂ: 234/2025

ಅರ್ಜಿದಾರರು: ಶ್ರೀಮತಿ. ನಂಜಮ್ಮ

ವಿರುದ್ಧ

ಎದುರುದಾರರು: ಶ್ರೀ. ಶಿವನಂಜಯ್ಯ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಹಾಗೂ 1ನೇ ಮತ್ತು 2ನೇ ಎದುರುದಾರರ ತಾಯಿಯಾದ ಯರಸನಮ್ಮ ಕೋಂ ನಂಜಯ್ಯ @ ನಂಜೇಗೌಡ ಇವರು ದಿನಾಂಕ: 07.08.2016 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ಹೊಸಗಬ್ಬಾಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ 3ನೇ ಮತ್ತು 4ನೇ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿರುವುದು ಸರಿಯಷ್ಟೆ, ಇವರ ಮರಣದ ದಿನಾಂಕದ ಬಗ್ಗೆ ಯಾರಿಗಾದರು ತಕರಾರು ಇದ್ದಲ್ಲಿ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖ್ಯಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 06/09/2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆ ಸಮಯಕ್ಕೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ, ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 29ನೇ ಜುಲೈ 2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಅರ್ಜಿದಾರರ ಪರ ವಕೀಲರು
ಬಿ.ವಿ ನಾಗೇಶ್
ವಕೀಲರು
ಕನಕಪುರ.

ಮಾನ್ಯ ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ

ಸಿ.ಮಿಸ್.ನಂ. 159/2025

ಅರ್ಜಿದಾರರು: 1) ಶ್ರೀ. ನಾರಾಯಣಗೌಡ ಬಿನ್ ಲೇಟ್ ವೀರೇಗೌಡ @ ಈರೇಗೌಡ ವಯಸ್ಸು 74 ವರ್ಷ, ವಾಸ: ವೀರೇಗೌಡನದೊಡ್ಡಿ ಗ್ರಾಮ, ಕೊಟ್ಟಗಾಳು ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್, ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು ಆನಮಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರಿಗೆ ಹೆಂಡತಿಯೂ, 4ನೇ ಅರ್ಜಿದಾರರಿಗೆ ಸಹೋದರಿಯೂ, ಅರ್ಜಿದಾರರುಗಳಾದ 2, 3 & 5 ರವರುಗಳಿಗೆ ತಾಯಿಯೂ ಆದ ಲೇಟ್ ಸುಮಿತ್ರ ಕೋಂ ನಾರಾಯಣಗೌಡ. ವಿ ರವರು ದಿನಾಂಕ: 12-10-1980 ರಂದು ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಆನಮಾನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 10-09-2025 ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 24/07/2025 ರಂದು ಸ್ವ-ಅಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿದ್ಧರಾಜು.ಎ.ಬಿ.
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 22-07-2025

PUBLIC NOTICE

ಬೆಂಗಳೂರು ವಿಶ್ವವಿದ್ಯಾಲಯ
ಪರೀಕ್ಷಾ ಕಟ್ಟಡ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು-560056 ಉಲ್ಲೇಖ ಸಂಖ್ಯೆ: ಪಿ.ವಿ.6/ಬಿ.ಎ/ಪಾ.ಪ್ರಾ./2024-25
ದಿನಾಂಕ: 18.03.2025

ಪ್ರಕಟಣೆ

ಶ್ರೀಮತಿ Susan Koshy ಅವರು ಅರ್ಜಿ ಸಲ್ಲಿಸಿ ಏಪ್ರಿಲ್-2010 ರಲ್ಲಿ ನೀಡಲಾದ ನೋಂದಣಿ ಸಂಖ್ಯೆ: M06A1414 ಹೊಂದಿರುವ ತಮ್ಮ ಮೂಲ ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ.) ಪದವಿ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದಾರೆ. ಈ ಪದವಿ ಪ್ರಮಾಣಪತ್ರ ಕಳೆದುಹೋಗಿದೆ ಎಂದು ಅವರು ತಿಳಿಸಿದ್ದಾರೆ. ಮೇಲೆ ತಿಳಿಸಿದ ಕಾರಣಕ್ಕಾಗಿ, ಅವರು ನಕಲಿ ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ.) ಪದವಿ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಈ ಮಧ್ಯೆ, ಈ ಪದವಿ ಪ್ರಮಾಣಪತ್ರವು ಯಾರಿಗಾದರೂ ಕಂಡುಬಂದರೆ, ಈ ಪತ್ರಿಕಾ ಪ್ರಕಟಣೆಯ 15 ದಿನಗಳ ಒಳಗೆ ಅದನ್ನು ರಿಜಿಸ್ಟ್ರಾರ್ (ಮೌಲ್ಯಮಾಪನ), ಪರೀಕ್ಷಾ ಕಟ್ಟಡ, ಬೆಂಗಳೂರು ವಿಶ್ವವಿದ್ಯಾಲಯ; ಗಾಂಧಿಭವನ ರಸ್ತೆ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು-560056 ಗೆ ಕಳುಹಿಸಲು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಮೇಲೆ ತಿಳಿಸಿದ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ಹೊಂದಿರುವ ನಕಲಿ ಪದವಿ ಪ್ರಮಾಣಪತ್ರವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಶಿಫಾರಸಿನ ಆಧಾರದ ಮೇಲೆ ನೀಡಲಾಗುತ್ತದೆ. ಮೇಲೆ ತಿಳಿಸಿದ ಮೂಲ ಪದವಿ ಪ್ರಮಾಣಪತ್ರವು ಸ್ವಯಂಚಾಲಿತವಾಗಿ ಅಮಾನ್ಯವಾಗುತ್ತದೆ ಮತ್ತು ಯಾವುದೇ ಕಾನೂನು ಮಾನ್ಯತೆಯನ್ನು ಹೊಂದಿರುವುದಿಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

ಆದೇಶದ ಮೂಲಕ,
Sd/-
ಕುಲಸಚಿವರು (ಮೌಲ್ಯಮಾಪನ)

ಕಲಾಸಿಪಾಳ್ಯದಲ್ಲಿ ಜಿಲೆಟಿನ್ ಪತ್ತೆ: ಬಂಧನ

ಬೆಂಗಳೂರು: ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಇತ್ತೀಚಿಗೆ ಸ್ಫೋಟಕ ಪತ್ತೆ ಪ್ರಕರಣಕ್ಕೆ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಕೋಲಾರ ಮೂಲದ ಗಣೇಶ್, ಮುನಿರಾಜ್ ಮತ್ತು ಶಿವಕುಮಾರ್ ಬಂಧಿತರು. ಆರೋಪಿಗಳ ವಿಚಾರಣೆ ವೇಳೆ ಕೆಲವು ಮಾಹಿತಿ ಬಹಿರಂಗವಾಗಿದೆ. ಐದು ತಂಡ ರಚಿಸಿ ತನಿಖೆ ನಡೆಸಿದ್ದ ಕಲಾಸಿಪಾಳ್ಯ ಠಾಣೆ ಪೊಲೀಸರು ಸದ್ಯ ಮೂವರನ್ನು ಬಂಧಿಸುವ ಮೂಲಕ ಬಂಧಿತರಿಂದ 22 ಜಿಲೆಟಿನ್ ಜೆಲ್, 30 ಡಿಟೋನೇಟರ್ಸ್ ವಶಕ್ಕೆ ಪಡೆದುಕೊಂಡಿದ್ದಾರೆ. ಇನ್ನೂ ಕೆಲವು ಆರೋಪಿಗಳ ಪತ್ತೆಗಾಗಿ ಪೊಲೀಸರಿಂದ ಹುಡುಕಾಟ ನಡೆದಿದೆ.

ಬಂಧಿತ ಆರೋಪಿಗಳ ವಿಚಾರಣೆ ವೇಳೆ ಕೆಲವು ಮಾಹಿತಿ ಬಹಿರಂಗಗೊಂಡಿವೆ. ಆರೋಪಿಗಳು ಸ್ಫೋಟಕಗಳನ್ನು ಬ್ಯಾಗ್‌ನಲ್ಲಿ ತೆಗೆದುಕೊಂಡು ಬಂದಿದ್ದಾರೆ. ನಂತರ ಬಸ್ ನಿಲ್ದಾಣದಲ್ಲಿರುವ ಶೌಚಾಲಯಕ್ಕೆ ತೆರಳಿದ್ದು, ಬ್ಯಾಗ್‌ಗಳನ್ನು ಹೊರಗಡೆ ಇಟ್ಟು ಹೋಗಿದ್ದಾರೆ. ಈ ವೇಳೆ ಹೊರ ಬಂದಾಗ ಅಲ್ಲಿ ಹೋಮ್ ಗಾರ್ಡ್ಸ್ ಇರುವುದನ್ನು ನೋಡಿ ಬೆದರಿ ಅಲ್ಲಿಯೇ ಬ್ಯಾಗ್ ಬಿಟ್ಟು ಹೋಗಿದ್ದಾರೆ. ಕೋಲಾರದಲ್ಲಿ ಜಿಲೆಟಿನ್ ಕಡ್ಡಿಗಳನ್ನು ಖರೀದಿಸಿದ್ದಾರೆ. ಆರೋಪಿಗಳು ಸ್ಫೋಟಕಗಳನ್ನು ಕೊಳ್ಳೆಗಾಲದಲ್ಲಿ ಬೋರ್‌ವೆಲ್ ಮತ್ತು ಗುಂಡಿಯಲ್ಲಿ ಬಂಡೆ ಒಡೆಯಲು ಬಳಸಲು ತೆಗೆದುಕೊಂಡು ಹೋಗುತ್ತಿರುವುದಾಗಿ ವಿಚಾರಣೆ ವೇಳೆ ತಿಳಿದುಬಂದಿದೆ.

ಆತಂಕ ಸೃಷ್ಟಿಸಿದ್ದ ಪ್ರಕರಣ

ಜುಲೈ 23ರಂದು ಕೆ.ಆರ್.ಮಾರ್ಕೆಟ್ ಬಳಿಯ ಕಲಾಸಿಪಾಳ್ಯದ ಬಿಎಂಟಿಸಿ ಬಸ್ ನಿಲ್ದಾಣದ ಶೌಚಾಲಯದಲ್ಲಿ ಸ್ಫೋಟಕಗಳು ತುಂಬಿದ್ದ ಬ್ಯಾಗ್ ಕಂಡು ಬಂದಿತ್ತು. ಆರು ಜಿಲೆಟಿನ್ ಕಡ್ಡಿಗಳು, ಡೆಟೋನೇಟರ್‌ಗಳು ಪತ್ತೆ ಯಾಗಿತ್ತು. ಶೌಚಾಲಯದ ಹೊರಗೆ ಇಟ್ಟಿದ್ದ ಚೀಲವಿರುವ ಬಗ್ಗೆ ಭದ್ರತಾ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತ್ವರಿತವಾಗಿ ಸ್ಥಳಕ್ಕೆ ಧಾವಿಸಿ, ಇಡೀ ಪ್ರದೇಶವನ್ನು ಸುತ್ತುವರೆದರು. ಕೂಡಲೇ ಪ್ರಯಾಣಿಕರನ್ನು ಬಸ್ ನಿಲ್ದಾಣದಿಂದ ತೆರವುಗೊಳಿಸಲಾಗಿತ್ತು. ಈ ಸ್ಫೋಟಕ ಗಳನ್ನು ಕಲ್ಲುಕ್ವಾರಿಯಲ್ಲಿ ಬಳಸಲು ಕೊಂಡೊಯ್ಯುತ್ತಿದ್ದ ಸ್ಫೋಟಕಗಳು ಇರಬಹುದೆಂದು ಪೊಲೀಸರು ಈ ಮುಂಚೆ ಶಂಕೆ ವ್ಯಕ್ತಪಡಿಸಿದ್ದರು.

ಸಮಾಚಾರ ಸಣ್ಣದಲ್ಲ

ನವೋದಯ ವಿದ್ಯಾಲಯಕ್ಕೆ ಆಯ್ಕೆ

ಬೆಂಗಳೂರು: ಕೆ ಆರ್‌ಪುರಂನ ದೇವಸಂದ್ರದ ಲಿಟಲ್ ಬ್ಲೂಂ ಆಂಗ್ಲ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ ಕುಮಾರಿ ನಿರೋಷ ಮೈತ್ರಿ ಕೆ ಪಿ

ನವೋದಯ ಪ್ರವೇಶ ಪರೀಕ್ಷೆ ಬರೆದು, ಬಾಗಲೂರಿನ ಜವಾಹರ ನವೋದಯ ವಿದ್ಯಾಲಯಕ್ಕೆ ಆಯ್ಕೆ ಆಗಿದ್ದಾರೆ. ವಿದ್ಯಾರ್ಥಿನಿ ಸಾಧನೆಗೆ ತಾಯಿ ಜ್ಯೋತಿ ಪ್ರಭಾಕರ್ ಹಾಗೂ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.

ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರಕ್ಕೆ ಕೆ.ಆರ್. ಮೀರಾ ಆಯ್ಕೆ

ಬೆಂಗಳೂರು: ಮಾಲಯಾಳಂ ಸಾಹಿತಿ ಕೆ.ಆರ್. ಮೀರಾ ಅವರು 2025ನೇ ಸಾಲಿನ ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ದಕ್ಷಿಣ ಭಾರತೀಯ ಭಾಷಾ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ

ನೀಡಿದ ಲೇಖಕರನ್ನು ಗುರುತಿಸಿ ನೀಡಲಾಗುವ ಬುಕ್ ಬ್ರಹ್ಮ ಸಾಹಿತ್ಯ ಪ್ರಶಸ್ತಿ ನಾಲ್ಕು ಪ್ರಮುಖ ದಕ್ಷಿಣ ಭಾರತೀಯ ಭಾಷೆಗಳಾದ ಮಾಲಯಾಳಂ, ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳ ನಡುವೆ ಪರ್ಯಾಯವಾಗಿ ನೀಡಲಾಗುತ್ತದೆ. ಈ ವರ್ಷದ ಪ್ರಶಸ್ತಿ ಮಾಲಯಾಳಂ ಲೇಖಕಿ ಕೆ.ಆರ್.ಮೀರಾ ಅವರಿಗೆ ಸಂದಿದ್ದು, ಆ.8 ರಿಂದ ಬೆಂಗಳೂರು ಸೈಂಟ್ ಜಾನ್ಸ್ ಸಭಾಂಗಣದಲ್ಲಿ ನಡೆಯುವ ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಪಶ್ಚಿಮವಾಹಿನಿ ಕೃಷ್ಣ ನೃತ್ಯ ನಾಟಕ

ಬೆಂಗಳೂರು: ನಗರದ ಚೌಡಯ್ಯ ಸ್ಮಾರಕಭವನದಲ್ಲಿ ಜು.30ರಂದು ಬೆಳಗ್ಗೆ 11.00 ಗಂಟೆಯಿಂದ 7.00 ಗಂಟೆಯವರೆಗೆ ಗೋಬ್ರಹ್ಮ ಪ್ರೊಡಕ್ಷನ್ಸ್ ನಿಂದ ಪಶ್ಚಿಮವಾಹಿನಿ ಕೃಷ್ಣ ನೃತ್ಯ ನಾಟಕವನ್ನು ಆಯೋಜಿಸಿದೆ. 90 ನಿಮಿಷಗಳ ಕಾಲ ನಡೆಯಲಿರುವ ಈ ಶಾಸ್ತ್ರೀಯ ನೃತ್ಯ ನಾಟಕದಲ್ಲಿ 40ಕ್ಕೂ ಅಧಿಕ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಈ ಕಾರ್ಯಕ್ರಮವು ಕಲಾ ನಿರ್ಮಾಪಕಿ ರೂಪಾ ಪ್ರಸಾದ್‌ರ ಗೋಬ್ರಹ್ಮ ಪ್ರೊಡಕ್ಷನ್ ಹೌಸ್‌ನಿಂದ ಆಯೋಜಿಸಲಾಗಿದೆ. ನೃತ್ಯ ನಾಟಕದಲ್ಲಿ ಕಲಾವಿದೆ ಬದರಿ ದಿವ್ಯ ಭೂಷಣ್ ನಾಯಕಿ ಹಾಗೂ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಭೂಷಣ್ ಸಾಹಿತ್ಯ ಹಾಗೂ ಚಿತ್ರಕಥೆಯನ್ನು ಬರೆದು, ಸಂಗೀತ, ನೃತ್ಯ ಸಂಯೋಜನೆಯನ್ನು ಮಾಡಿದ್ದಾರೆ. ಟಿಕೆಟ್ ದರ 499 ರು.ನಿಂದ ಆರಂಭವಾಗಿದ್ದು, ಬುಕ್ ಮೈ ಶೋ ಹಾಗೂ ಟಿಕ್ಕಲ್.ಕಾಮ್ (https://tikkl.com/) ನಲ್ಲೂ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ : https://www.gobrahma.com/ಗೆ ಭೇಟಿ ನೀಡಿ ಹಾಗೂ +919845957876 ಸಂಪರ್ಕಿಸಿ.

ಇಲಾಖೆ ಜತೆ ವಿಲೀನ

ಬೆಂಗಳೂರು: ಆಯುಷ್ ಇಲಾಖೆಯ ಆಯುರ್ವೇದ, ಸಿದ್ದ ಮತ್ತು ಯುನಾನಿ ಔಷಧಗಳ ಅಮಲು ಜಾರಿ ವಿಭಾಗ ಹಾಗೂ ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಜತೆಗೆ ವಿಲೀನಗೊಳಿಸಲಾಗಿದೆ. ಆಯುಷ್ ಇಲಾಖೆಯ ಆಯುರ್ವೇದ, ಯುನಾನಿ, ಸಿದ್ದ ವಿಭಾಗದಲ್ಲಿ ಮಂಜೂರಾದ ಹಾಗೂ ಜಾರಿಯಲ್ಲಿರುವ ಹುದ್ದೆಗಳಾದ ಔಷಧ ಪರಿವೀಕ್ಷಕರು, ಸಹಾಯಕ ಔಷಧ ನಿಯಂತ್ರಕರು, ಉಪ ಔಷಧ ನಿಯಂತ್ರಕರು ಹಾಗೂ ಬೆಂಗಳೂರಿನ ಪರೀಕ್ಷಾ ಪ್ರಯೋಗಾಲಯದ ತಾಂತ್ರಿಕ ಮತ್ತು ಲಿಪಿಕ ವೃಂದದ ಸಿಬ್ಬಂದಿಗಳನ್ನು ಹುದ್ದೆಗಳೊಂದಿಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಔಷಧ ನಿಯಂತ್ರಣ ವಿಭಾಗದಡಿಯಲ್ಲಿ ವಿಲೀನಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕಾಂಗ್ರೆಸ್ ಏನನ್ನೂ ಮಾಡಿಲ್ಲ ಎಂಬುದನ್ನು ಆ ಪಕ್ಷದ ಅಗ್ರ ನಾಯಕ ರಾಹುಲ್ ಗಾಂಧಿಯವರೇ ಒಪ್ಪಿಕೊಂಡಿದ್ದಾರೆ . ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಶಿಷ್ಟರಿಗೂ ದ್ರೋಹ ಬಗೆಯುತ್ತಿದ್ದಾರೆ. ಅವರ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಸೆ. 6ರವರೆಗೆ ತಕರಾರು ಅರ್ಜಿ ಸ್ವೀಕಾರ | ಮೀಸಲು ಪ್ರಕ್ರಿಯೆ ಬಳಿಕ ಚುನಾವಣೆಗೆ ಸಿದ್ಧತೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಆ.3ರಿಂದ ಜಿಬಿಎ ವಾರ್ಡ್ ಮರುವಿಂಗಡಣೆ ಆರಂಭ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ

(ಬಿಬಿಎಂಪಿ) ವಾರ್ಡ್ ಗಳ ಮರುವಿಂಗಡಣಾ ಆಯೋಗವು ವಾರ್ಡ್ ಗಳ ಮರುರಚನೆ, ಗಡಿ ಗುರುತಿಸುವಿಕೆ ಕೆಲಸ ಆರಂಭಿಸಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿಸಿಎಂ ಅವರು ವಿಧಾನಸೌಧದಲ್ಲಿ ಮಂಗಳವಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಬಿಬಿಎಂಪಿ) ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದರು.

ಈ ಆಯೋಗವು ತಾತ್ಕಾಲಿಕ ವಾರ್ಡ್ ಗಳು, ಗಡಿ ಗುರುತಿಸುವಿಕೆ, ತಕರಾರು ಅರ್ಜಿಗಳ ಸ್ವೀಕಾರ ಮತ್ತಿತರ ಕೆಲಸಗಳ ಅಂತಿಮ ನಿರ್ಣಯಗಳನ್ನು ಒಂದು ತಿಂಗಳ ಕಾಲ ಅಂದರೆ ಸೆ.1 ರವರೆಗೆ ನಿರ್ವಹಿಸಲಿದೆ. ಆನಂತರ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ತದನಂತರ ಈ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಈ ಎಲ್ಲಾ ಪ್ರಕ್ರಿಯೆ ಮುಗಿದ ತಕ್ಷಣ ನಾವು ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತೇವೆ.

ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡು, ವೇಳಾಪಟ್ಟಿ ನಿಗದಿ ಮಾಡಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತೇವೆ ಎಂದರು.

ಆ.15 ರೊಳಗೆ ಹೆಬ್ಬಾಳ ಜಂಕ್ಷನ್ ಉದ್ಘಾಟನೆ: ಹೆಬ್ಬಾಳ ಮೇಲ್ಸೇತುವೆ ಜಂಕ್ಷನ್, ಶಿವಾನಂದ ಸರ್ಕಲ್ ಜಂಕ್ಷನ್ ಅಭಿವೃದ್ಧಿ ಹಾಗೂ ಗಾಂಧಿ ಬಜಾರ್ ಬಳಿಯ ಬಹುಮಹಡಿ ಪಾರ್ಕಿಂಗ್ ಕಟ್ಟಡವನ್ನು ಆ.15 ರ ಒಳಗಾಗಿ ಉದ್ಘಾಟನೆ ಮಾಡಬೇಕು ಎಂಬುದು ನಮ್ಮ ಆಲೋಚನೆ. ಕೆ.ಆರ್.ಪುರಂ ಕಡೆಯಿಂದ ಬರುವ ಹೆಬ್ಬಾಳ ಮೇಲ್ಸೇತುವೆ ಕಾಮಗಾರಿಯನ್ನು ಶೀಘ್ರದಲ್ಲೇ ಮುಗಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಬೇಕು ಎಂಬುದು ನಮ್ಮ ಆಲೋಚನೆ ಎಂದರು.

3,700 ಬೀದಿ ಬದಿ ವ್ಯಾಪಾರಿಗಳಿಗೆ ತಳ್ಳುವ ಗಾಡಿ ವಿತರಣೆ: ವಿವಿಧ ಯೋಜನೆಗಳ ಅಡಿ ಫಲಾನುಭವಿಗಳಾಗಿ ಆಯ್ಕೆಯಾದ 10-15 ಸಾವಿರ ಜನರಿಗೆ ಸೌಲಭ್ಯಗಳ ಹಂಚಿಕೆ ಮಾಡಲಾಗುವುದು. 3,700 ಬೀದಿಬದಿ ವ್ಯಾಪಾರಿಗಳು ತಳ್ಳುವ ಗಾಡಿಗಳಿಗೆ ಅರ್ಜಿ ಸಲ್ಲಿಸಿದ್ದರು. ಅವರಿಗೆ ಸೌಲಭ್ಯ ನೀಡಲಾಗುತ್ತಿದೆ ಎಂದು ತಿಳಿಸಿದರು.

ಬಿಜೆಪಿ ಮೊದಲು ತನ್ನ ಮನೆ ಸರಿಪಡಿಸಿಕೊಳ್ಳಲಿ

ಉಪಮುಖ್ಯಮಂತ್ರಿಗಳನ್ನು ಸಿಎಂ ಕಡೆಗಣಿಸಿದ್ದಾರೆ ಎನ್ನುವ ಬಿಜೆಪಿ ಟೀಕೆಗೆ ಡಿಕೆಶಿ ಪ್ರತಿಕ್ರಿಯಿಸಿ, ಬಿಜೆಪಿಯವರು ಮೊದಲು ಅವರ ಮನೆಯನ್ನು ಸರಿಮಾಡಿಕೊಳ್ಳಲಿ. ಅವರ ಪಕ್ಷ, ಮನೆಯೇ ಅಸ್ತವ್ಯಸ್ತವಾಗಿದೆ. ಅವರ ಪಕ್ಷದೊಳಗೆ ಅನೇಕ ಮೇಲಾಟಗಳು ನಡೆಯುತ್ತಿವೆ. ಅವರ ಪಕ್ಷದ ನಾಯಕರ ಹೇಳಿಕೆಗಳನ್ನು ಎಲ್ಲರೂ ನೋಡಿದ್ದಾರೆ. ಅವರ ಮಧ್ಯೆಯೇ ಸಾಕಷ್ಟು ತಿಕ್ಕಾಟಗಳು ನಡೆಯುತ್ತಿವೆ. ಮೊದಲು ಅವರ ಸಮಸ್ಯೆಗಳನ್ನು ಸರಿಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ಅ.22ರಿಂದ ಬೃಹತ್ ಇ ಖಾತಾ ಜಾಗೃತಿ ಅಭಿಯಾನ

ಬೆಂಗಳೂರಲ್ಲಿ 24 ಲಕ್ಷ 'ಎ' ಮತ್ತು 'ಬಿ' ಖಾತೆಗಳಿವೆ. ಈಗಾಗಲೇ 6.5 ಲಕ್ಷ ಇ- ಖಾತೆಗಳನ್ನು ಜನರು ತೆಗೆದುಕೊಂಡಿದ್ದಾರೆ. ಜನರಿಗೆ ಆನ್ ಲೈನ್ ನಲ್ಲಿ ಆಸ್ತಿ ವಿವರಗಳು ನಿಖರವಾಗಿ ದೊರೆಯಬೇಕು. ಮುಂದಿನ ದಿನಗಳಲ್ಲಿ ತೊಂದರೆಯಾಗಬಾರದು ಎಂಬುದು ನಮ್ಮ ಆಲೋಚನೆ. ಈ ಕಾರಣಕ್ಕೆ ಅ.22 ರಿಂದ ನವೆಂಬರ್ 1 ರವರೆಗೆ ಬೃಹತ್ ಜಾಗೃತಿ ಅಭಿಯಾನದ ಆಲೋಚನೆ ಮಾಡಲಾಗಿದೆ. ಈ ಅಭಿಯಾನ ಯಶಸ್ವಿಗೊಳಿಸಲು ಶಿಕ್ಷಕರು, ಬೆಸ್ಕಾಂ ಬಿಲ್ ಕಲೆಕ್ಟರ್‌ಗಳು, ಪಾಲಿಕೆಯ ನೌಕರರ ಭಾಗವಹಿಸುವಿಕೆ ಬಗ್ಗೆ ಚರ್ಚಿಸಲು ಸೂಚನೆ ನೀಡಿದ್ದೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

> **ನಾವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಗೆ ಮುಂದಾಗಿದ್ದು, ಈ ವಿಚಾರವಾಗಿ ಪ್ರತಿಪಕ್ಷಗಳ ನಾಯಕರ ಅಭಿಪ್ರಾಯವನ್ನು ಪಡೆದಿದ್ದೇವೆ. ಪಾಲಿಕೆ ಚುನಾವಣೆ ಕುರಿತಾಗಿ ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಬೇಕಾಗಿದೆ. ಬೆಂಗಳೂರು ಹಾಗೂ ನಾಗರಿಕರ ಹಿತಕ್ಕಾಗಿ ಪಾಲಿಕೆ ವಿಭಜನೆ ಮಾಡುತ್ತಿದ್ದೇವೆ. ನಾವು ಭೌಗೋಳಿಕ ಹಾಗೂ ಆಡಳಿತ, ಆರ್ಥಿಕತೆ ಹಾಗೂ ಭವಿಷ್ಯದಲ್ಲಿ ಬೆಂಗಳೂರಿನ ವಿಸ್ತರಣೆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಈ ತೀರ್ಮಾನ ಮಾಡಿದ್ದೇವೆ.**
> –**ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ





ತಮ್ಮ ಹೆಸರಿಗೆ ಅರ್ಪಿಸಲಾದ ವಿಶ್ವೇಶ್ವರ ಭಟ್ಟರ ನೂರನೇ ಪುಸ್ತಕ 'ವಿದೇಶ ಕಾಲ' ಕೃತಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದರು.

ನನ್ನ, ಭಟ್ಟರದ್ದು ಕಪಟರಹಿತ ಸ್ನೇಹ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನನ್ನ ಹಾಗೂ ವಿಶ್ವೇಶ್ವರ ಭಟ್ಟರ ಸ್ನೇಹ ಕಪಟರಹಿತ, ವೃತ್ತಿ ಮೀರಿದ ಸಂಬಂಧವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ವಿಶ್ವೇಶ್ವರ ಭಟ್ಟರ ನೂರನೇ ಪುಸ್ತಕ 'ವಿದೇಶ ಕಾಲ' ಪುಸ್ತಕವನ್ನು ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ನಾನು, ಭಟ್ಟರು ಹಾಗೂ ಶ್ರೀನಿವಾಸ್ ಅವರದ್ದು ವೃತ್ತಿ ಮೀರಿದ, ಕಪಟವಿಲ್ಲದ ಸ್ನೇಹವಾಗಿದೆ. ಅವರ ನೂರನೇ ಕೃತಿಯಾಗಿರುವ ವಿದೇಶ ಕಾಲವನ್ನು ನನಗೆ ಅರ್ಪಿಸಿರುವುದು ಅವರ ಪ್ರೀತಿ ಹಾಗೂ ಅಭಿಮಾನದ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು.

ನಾನು, ಶ್ರೀನಿವಾಸ್ ಅವರು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೆ, ವಿಶ್ವೇಶ್ವರ ಭಟ್ಟರು ಪತ್ರಕರ್ತರಾಗಿ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಬೇರೆ ಬೇರೆ ಕ್ಷೇತ್ರದಲ್ಲಿ ನಾವಿದ್ದರೂ, ನಮ್ಮ ಸ್ನೇಹ ಎಲ್ಲವನ್ನು ಮೀರಿದೆ. ವಿಶ್ವೇಶ್ವರ ಭಟ್ಟರು ನೂರನೇ ಕೃತಿಯನ್ನು ಬಿಡುಗಡೆಗೊಳಿಸಿದ್ದು, ಇನ್ನಷ್ಟು ಕೃತಿಗಳು ಅವರಿಂದ ಮೂಡಿಬರಲಿ ಎಂದು ಆಶಿಸುತ್ತೇವೆ ಎಂದರು. ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗು ತ್ತಿದೆ ಎನ್ನುವ ಸಮಯದಲ್ಲಿ ಪುಸ್ತಕದ ಆಸಕ್ತಿ ಹೆಚ್ಚಿಸುವ ಕೆಲಸವನ್ನು ವಿಶ್ವೇಶ್ವರ ಭಟ್ಟರು ಮಾಡುತ್ತಿದ್ದಾರೆ. ಅವರ ಈ ಸಾಹಿತ್ಯ ಕೃಷಿ ಇನ್ನಷ್ಟು ಸಾಗಲಿ. ವಿಶ್ವವಾಣಿ ಪತ್ರಿಕೆಯ ಸಂಪಾದಕರಾಗಿ, ಪ್ರವಾಸಿ ಪ್ರಪಂಚ ಎನ್ನುವ ಪ್ರವಾಸೋದ್ಯಮಕ್ಕೆ ಮೀಸಲಿರುವ ವಾರ ಪತ್ರಿಕೆಯನ್ನು ಆರಂಭಿಸಿದ್ದಾರೆ. ಈ ಎಲ್ಲ ಒತ್ತಡದ ನಡುವೆಯೂ ಅವರು ನೂರು ಪುಸ್ತಕಗಳನ್ನು ಬರೆದಿರುವುದು ದೊಡ್ಡ ಸಾಧನೆ. ಅವರು ಇನ್ನಷ್ಟು ಪುಸ್ತಕಗಳನ್ನು ಬರೆಯಲಿ ಎಂದು ಶುಭಕೋರಿದರು. ಈಗಾಗಲೇ ನೂರಕ್ಕೂ ಹೆಚ್ಚು ದೇಶಗಳನ್ನು ಸುತ್ತುವ ಮೂಲಕ ಜಗತ್ತಿನ ಅರ್ಧಕ್ಕಿಂತ ಹೆಚ್ಚು ದೇಶಗಳನ್ನುಸುತ್ತಿರುವ ವಿಶ್ವೇಶ್ವರ ಭಟ್ಟರು ಮುಂದಿನ ದಿನದಲ್ಲಿ ಇನ್ನುಳಿದ ದೇಶಗಳನ್ನು ಸುತ್ತಿ ಬರುತ್ತಾರೆ ಎನ್ನುವ ನಂಬಿಕೆಯಿದೆ. ವಿದೇಶ ಪ್ರವಾಸದೊಂದಿಗೆ ಅಲ್ಲಿನ ಅನುಭವ ನಮ್ಮ ಜನರಿಗೆ ತಲುಪಿಸುವ, ಜ್ಞಾನ ಹಂಚುವ ಕೆಲಸ ಹೀಗೆ ಮುಂದುವರಿಯಲಿ ಎಂದು ಆಶಿಸಿದರು.

ನೂತನ ಲಗೇಜ್ ನಿಯಮ ವದಂತಿಯಷ್ಟೇ: ಕೆಎಸ್‌ಆರ್‌ಟಿಸಿ

ಬೆಂಗಳೂರು: ಕೆಎಸ್‌ಆರ್‌ಟಿಸಿಯಲ್ಲಿ ನೂತನ ಲಗೇಜ್ ನಿಯಮ ಜಾರಿ

ಎನ್ನುವುದು ಸತ್ಯಕ್ಕೆ ದೂರವಾಗಿದ್ದು, ಇದೊಂದು ವದಂತಿಯಾಗಿದೆ ಎಂದು ಕೆಎಸ್‌ಆರ್‌ಟಿಸಿ ಸ್ಪಷ್ಟಪಡಿಸಿದೆ. ನಿಗಮದ ಬಸ್ಸುಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಲಗೇಜ್, ಸರಕುಗಳನ್ನು ಸಾಗಿಸಲು ಹಿಂದಿನಿಂದಲೂ ವ್ಯವಸ್ಥೆ ಜಾರಿಯಿದ್ದು, ವಾಷಿಂಗ್ ಮಷಿನ್, ಫ್ರಿಡ್ಜ್, ಟ್ರಕ್ ಟಯರ್, ಅಲ್ಯೂಮಿನಿಯಂ ಪೈಪ್, ಕಬ್ಬಿಣದ ಪೈಪ್, ಪಾತ್ರೆ, ಬೆಕ್ಕು, ನಾಯಿ, ಮೊಲಗಳನ್ನು ಸಾಗಿಸಲು 05-ನವೆಂಬರ್ 1999ರಿಂದಲೇ ಅವಕಾಶ ನೀಡಲಾಗಿದ್ದು, ನಿಗಮದಲ್ಲಿ ಜಾರಿಯಲ್ಲಿರು ತ್ತದೆ ಎಂದು ತಿಳಿಸಿದೆ. ಈ ವ್ಯವಸ್ಥೆಯ ಅನುಷ್ಠಾನದಲ್ಲಿ ಕಾಲದಿಂದ ಕಾಲಕ್ಕೆ ದರಗಳ ಪರಿಷ್ಕರಣೆ, 30 ಕೆಜಿ ವರೆಗೆ ಲಗೇಜ್ ಕೊಂಡೊಯ್ಯಲು ಉಚಿತ ಅವಕಾಶ, ಸಾಗಿಸಬಹುದಾದ ವಸ್ತುಗಳ ಪ್ರಯಾಣ ಇತ್ಯಾದಿಗಳನ್ನು ಉಲ್ಲೇಖಿಸಿ 28 ಅಕ್ಟೋಬರ್ 2022ರಿಂದಲೂ ಜಾರಿಯಲ್ಲಿದ್ದು, ಇತ್ತೀಚೆಗೆ ಯಾವುದೇ ಹೊಸ ಲಗೇಜ್ ನಿಯಮ, ಸುತ್ತೋಲೆಯನ್ನು ನಿಗಮದಲ್ಲಿ ಜಾರಿಗೆ ತಂದಿರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಸಂವಾದ ಕಾರ್ಯಕ್ರಮ ಆ.5ಕ್ಕೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ಆ.5 ರಂದು ನಯನ ಸಭಾಂಗಣದಲ್ಲಿ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್‌ರಿಂದ ಉಪನ್ಯಾಸ-ಸಂವಾದ-ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತ ಉಪನ್ಯಾಸಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ಸಾಹಿತ್ಯಾಸಕ್ತರು ಆ.2ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿದೆ. ಹೆಚ್ಚಿನ ಮಾಹಿತಿಗೆ https://sahithyaacademy.karnataka.gov.in ನ್ನು ವೀಕ್ಷಿಸಿ ಎಂದು ಪ್ರಕಟಣೆ ತಿಳಿಸಿದೆ.

ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ 2025-26 ನೇ ಸಾಲಿನ ಪ್ರಧಾನ ಕಾರ್ಯದರ್ಶಿಯಾಗಿ ಗಣೇಶ್.ಕೆ.ಎಸ್., ಅಧ್ಯಕ್ಷರಾಗಿ ಮೋಹನ್ ಕುಮಾರ್.ಬಿ.ಎನ್., ಉಪಾಧ್ಯಕ್ಷರಾಗಿ ಶೈಲೇಂದ್ರ ಭೋಜಕ್, ಖಜಾಂಚಿಯಾಗಿ ಚೇತನ್ ಶಿವಕುಮಾರ್.ಕೆ., ಸಮಿತಿ ಸದಸ್ಯರಾಗಿ ಎನ್.ನರಸಿಂಹ ಮೂರ್ತಿ, ರಾಬರ್ಟ್ ಮಾರಿಯಾ ಕ್ಲೆಮೆಂಟ್, ಅಬ್ದುಲ್ ಅಕ್ರಂ ಹಕ್ ಚೌಧರಿ, ಸುಧಾಕರ್.ಡಿ., ಪುಷ್ಕರ್ ವಿಜಯರಾಮ್, ಸುಧೀಂದ್ರ ಶ್ರೀರಂಗರಾಜು ಆಯ್ಕೆಯಾಗಿದ್ದಾರೆ.

ಆದಿಚುಂಚನಗಿರಿ ವಿವಿ ಘಟಿಕೋತ್ಸವದಲ್ಲಿ ನಿರ್ಮಲಾನಂದನಾಥ ಶ್ರೀ ಅಭಿಮತ

ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಅಗತ್ಯ

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ, ಪಿಎಚ್.ಡಿ ಪದವಿಗಳನ್ನು ಪ್ರದಾನಿಸಲಾಯಿತು. ಆದಿಚುಂಚನಗಿರಿ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ, ಇಸ್ರೋ ಮಾಜಿ ಅಧ್ಯಕ್ಷ ಡಾ.ಸೋಮನಾಥ್ ಉಪಸ್ಥಿತರಿದ್ದರು.

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಶಿಕ್ಷಣ ಮತ್ತು ಸಂಶೋಧನೆ ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಆದಿಚುಂಚನಗಿರಿ ವಿವಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಎಂದು ಆದಿಚುಂಚನಗಿರಿ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಶಿಕ್ಷಣ ಮತ್ತು ಸಂಶೋಧನೆಗಳು ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಆದಿಚುಂಚನಗಿರಿ ವಿವಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ನಾಡಿನ ಪ್ರಥಮ ಖಾಸಗಿ ಕೃಷಿ ಕಾಲೇಜು ಸ್ಥಾಪಿಸಿದ ಹೆಗ್ಗಳಿಗೆ ನಮ್ಮ ವಿಶ್ವವಿದ್ಯಾಲಯದ್ದು, ಇದಕ್ಕೆ ಕೃಷಿ ಸಚಿವ ಚೆಲುವರಾಯಸ್ವಾಮಿ ಅವರ ಪ್ರಯತ್ನ ಕಾರಣ. ಘಟಿಕೋತ್ಸವದಲ್ಲಿ ಪಡೆಯುವ ಪದವಿ ಬೀಜರೂಪದ್ದು ಆ ಬೀಜ ಹೊರಗಿನ ಗಾಳಿ, ಮಣ್ಣು, ನೀರು, ಗೊಬ್ಬರ ಸೂರ್ಯನ ಬಿಸಿಲಿನಿಂದ ಚೈತನ್ಯ ಬಿಡಬೇಕು. ಆ ಚೈತನ್ಯ ನಮ್ಮ ಗುಣ ವರ್ತನೆಗಳಲ್ಲಿ ವ್ಯಕ್ತವಾಗುತ್ತದೆ. ತಾಯಿ ತಂದೆಯರು ಮಕ್ಕಳಿಗಾಗಿ ಎಷ್ಟೆಲ್ಲ ತ್ಯಾಗ ಮಾಡಿರುತ್ತಾರೆ, ಆ ಕೃತಜ್ಞತೆಯನ್ನು ಮಕ್ಕಳಾದವರು ಸದಾಕಾಲ ನೆನಪಿನಲ್ಲಿ ಇರಿಸಿಕೊಂಡು ಅವರ ವಿಷಯದಲ್ಲಿ ಕಾಳಜಿ ವಹಿಸಬೇಕು, ಹಾಗೆಯೇ ಸಮಾಜಕ್ಕೂ ಕೊಡುಗೆ ನೀಡಬೇಕು ಎಂದು ಹೇಳಿದರು. ಸಮಾರಂಭದಲ್ಲಿ ಕುಲಸಚಿವ ಡಾ.ಸಿ.ಕೆ. ಸುಬ್ಬರಾಯ, ಹಿಂದಿನ ಕುಲಪತಿ ಡಾ.ಚಂದ್ರಶೇಖರ ಶೆಟ್ಟಿ, ಡಾ.ಎಂ.ಎ.ಶೇಖರ್, ಟ್ರಸ್ಟ್ ನ ಗೌರವಾಧ್ಯಕ್ಷ ಡಾ.ಎನ್.ಎಸ್.ರಾಮೇಗೌಡ ಉಪಸ್ಥಿತರಿದ್ದರು.

ವೃತ್ತಿಪರರಿಗೆ ಏಕಾಗ್ರತೆ ಅಗತ್ಯ

ಇಸ್ರೋ ಮಾಜಿ ಅಧ್ಯಕ್ಷ ಡಾ.ಸೋಮನಾಥ್ ಮಾತನಾಡಿ, ಬದುಕಿನಲ್ಲಿ ವೈಫಲ್ಯ ಸಹಜ, ಎಷ್ಟೇ ವೈಫಲ್ಯಗಳನ್ನು ಎದುರಿಸಿದರೂ ಕಂಗೆಡಬಾರದು. ಯಾವುದೇ ವೃತ್ತಿಪರರಿಗೆ ಏಕಾಗ್ರತೆ ಇರಬೇಕಾದುದು ಅತ್ಯಗತ್ಯ. ಏಕಾಗ್ರತೆ ಸಾಧಿಸಿಕೊಂಡವರಿಗೆ ಯಾವ ವೈಫಲ್ಯವೂ ಕಂಗೆಡಿಸುವುದಿಲ್ಲ. ಬದುಕಿನಲ್ಲಿ ಯಾವುದೂ ಪರಿಪೂರ್ಣವಲ್ಲ, ನಾವು ನಿರಂತರವಾಗಿ ಕಲಿಯುತ್ತಿರಬೇಕಾಗುತ್ತದೆ. ವಿನಯ, ಪ್ರಾಮಾಣಿಕತೆ ಮತ್ತು ಸಮಗ್ರತೆ ಯಾವುದೇ ವೃತ್ತಿಪರರನ್ನು ನಿರಂತರವಾಗಿ ಬೆಳೆಸುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿ ಮೂರು ಸಾವಿರ ನೇರ ಉದ್ಯೋಗ ಸೃಷ್ಟಿ: ಸಚಿವ ಎಂ.ಬಿ.ಪಾಟೀಲ

ಬಾಟಂ ಪೊದ್ದಾರ್ ಕಂಪನಿಯಿಂದ 758 ಕೋಟಿ ಹೂಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿವಿಸಿ ಮತ್ತು ಪಿವಿಸಿ ಪೈಪುಗಳ ಉತ್ಪಾದಿಸುವ ಪೊದ್ದಾರ್ ಪ್ಲಂಬಿಂಗ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ರಾಜ್ಯದಲ್ಲಿ 758 ಕೋಟಿ ರು. ಹೂಡಿಕೆ ಮಾಡಲು ತೀರ್ಮಾನಿಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಪೊದ್ದಾರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಪೊದ್ದಾರ್ ಮತ್ತು ನಿರ್ದೇಶಕ ವರುಣ್ ಪೊದ್ದಾರ್ ಅವರ ಜತೆ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, ಪೊದ್ದಾರ್ ಪ್ಲಂಬಿಂಗ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ರಾಜ್ಯದಲ್ಲಿ 758 ಕೋಟಿ ರು. ಹೂಡಿಕೆ ಮಾಡಲು ತೀರ್ಮಾನಿಸಿದೆ.

ಕಂಪನಿಗೆ ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದ ಹಂತ-2ರಲ್ಲಿ 33 ಎಕರೆ ಜಮೀನು ನೀಡಿದ್ದು, 2026ರ ಆಗಸ್ಟ್ ಹೊತ್ತಿಗೆ ಇದು ತನ್ನ ತಯಾರಿಕಾ ಚಟುವಟಿಕೆ ಆರಂಭಿಸಲಿದೆ. ಕಂಪನಿಯು ಈ ಹಿಂದೆ 492 ಕೋಟಿ ರು. ಹೂಡಿಕೆ ಮಾಡುವುದಾಗಿ ಹೇಳಿತ್ತು. ಈಗ ಅದನ್ನು 758 ಕೋಟಿ ರು.ಗೆ ಏರಿಸಲು ಅನುಮೋದನೆ ಕೋರಿದೆ. ಈ ಯೋಜನೆಯಿಂದ 3 ಸಾವಿರ ನೇರ ಉದ್ಯೋಗ ಮತ್ತು 9 ಸಾವಿರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಮುಂದಿನ ಹತ್ತು ವರ್ಷಗಳಲ್ಲಿ ತನ್ನ ವಾರ್ಷಿಕ ವಹಿವಾಟನ್ನು 1,500 ಕೋಟಿ ರು.ಗಳಿಗೆ ಕೊಂಡೊಯ್ಯುವುದಾಗಿ ಕಂಪನಿ ಹೇಳಿದೆ. ಇದರಿಂದ ಸರಕಾರಕ್ಕೆ 3 ಸಾವಿರ ಕೋಟಿ ರುಪಾಯಿ ತೆರಿಗೆ ರೂಪದಲ್ಲಿ ಬರಲಿದೆ ಎಂದು ತಿಳಿಸಿದರು.

ವಿಜಯಪುರದಲ್ಲೂ ಘಟಕ ಸ್ಥಾಪನೆ: ಪೊದ್ದಾರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಪೊದ್ದಾರ್ ಮಾತನಾಡಿ, ಪೊದ್ದಾರ್ ಪ್ಲಂಬಿಂಗ್ ಕಂಪನಿಯು ವೇಮಗಲ್ ಘಟಕದ ಕಾರ್ಯಾರಂಭದ ನಂತರ ವಿಜಯಪುರ ಜಿಲ್ಲೆಯಲ್ಲೂ ಹೂಡಿಕೆ ಮಾಡಲಾಗುವುದು. ಅದಕ್ಕೆ ಪ್ರತ್ಯೇಕವಾದ ಯೋಜನೆ ರೂಪಿಸಲಾಗುತ್ತಿದೆ ಎಂದು ಸಚಿವರಿಗೆ ತಿಳಿಸಿದರು.

ರಾಜ್ಯದಲ್ಲಿ ಪೊದ್ದಾರ್ ಕಂಪನಿ ಹೂಡಿಕೆ ಕುರಿತಂತೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸಭೆ ನಡೆಸಿದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಪೊದ್ದಾರ್ ಮತ್ತು ನಿರ್ದೇಶಕ ವರುಣ್ ಪೊದ್ದಾರ್ ಭಾಗವಹಿಸಿದ್ದರು.

ವೇಮಗಲ್ ಬಳಿ 28 ಎಕರೆ ಜಾಗ

